FELICITATIONS TO SPEAKER

† ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಯವರು).—ಸ್ಪೀಕರ್ ಮಹೋದಯರೇ, ಶ್ರೀಮಾನ್ ದೊಡ್ಡಮೇಟಿಯವರು ಈ ಸಭೆಯ ಕಾರ್ಯಕಲಾಪಗಳನ್ನು ಸುಮಾರು ಎರಡೂವರೆ ಗಂಟೆಗಳ ಕಾಲ ಬಹಳ ದಕ್ಷತೆಯಿಂದ ನಡೆಸಿದ್ದಾರೆ. ಅವರಿಗೆ ಸಭೆಯ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ಈ ದಿವಸ ತಾವು ಅಧ್ಯಕ್ಷರಾಗಿ ಚುನಾಯಿತರಾಗಿರುವುದು ನಮ್ಮೆಲ್ಲರಿಗೂ ಬಹಳ ಸಂತೋಷವನ್ನುಂಟುಮಾಡಿದೆ. ಕಳೆದ 5 ವರ್ಷಗಳಿಂದಲೂ ಕೂಡ ತಾವು ಬಹಳ ದಕ್ಷತೆಯಿಂದ, ನಿಷ್ಪಕ್ಷಪಾತವಾಗಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದು ಎಲ್ಲರಿಗೂ ಕೂಡ ತೃಪ್ತಿಯನ್ನುಂಟುಮಾಡಿದ್ದೀರಿ. ಇನ್ನು 5 ವರ್ಷಗಳ ಕಾಲ ತಾವು ಅಧ್ಯಕ್ಷರಾಗಿ ಚುನಾಯಿತರಾಗಿರುವಾಗ ಇನ್ನು ಮುಂದೆಯೂ ಕೂಡ ಸಭೆಯ ಕಾರ್ಯಕಲಾಪಗಳನ್ನು ಎಲ್ಲರಿಗೂ ತೃಪ್ತಿಯಾಗುವಂತೆ ನಡೆಸಿಕೊಂಡುಹೋಗುವಿರಿ ಎಂಬ ನಂಬಿಕೆ ಸರ್ವರಿಗೂ ಕೂಡ ಇದೆಯೆಂದು ನಾನು ಸಭೆಯ ಪರವಾಗಿ ಹೇಳಲು ಇಷ್ಟಪಡುತ್ತೇನೆ. ವಯೋವೃದ್ಧರೂ ಅನುಭವಿಗಳೂ ಆಗಿರುವುದರಿಂದ ತಾವು ಬಹಳ ದಕ್ಷತೆಯಿಂದ ತಮ್ಮ ಕರ್ತವ್ಯ ನಿರ್ವಹಣೆ ಮಾಡುವಿರೆಂಬ ನಂಬಿಕೆ ನಮಗೆಲ್ಲರಿಗೂ ಇದೆ. ಒಳ್ಳೆಯ ನ್ಯಾಯವಾದಿಗಳೂ ಅಪಾರ ಅನುಭವದಿಂದ ಕೂಡಿದವರೂ ಆದ ತಾವು ಬಹಳ ವಿಚಕ್ಷಣೆಯಿಂದ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದರಲ್ಲಿ ಯಾರಿಗೂ ಅನುಮಾನವಿಲ್ಲ. ನಾನು ತಮ್ಮನ್ನು ಅನೇಕ ವರ್ಷಗಳಿಂದಲೂ ಬಲ್ಲೆ, ಅನೇಕ ವರ್ಷಗಳಿಂದ ತಮ್ಮೊಡನೆ ನಾನು ಕೆಲಸ ಮಾಡಿದ್ದೇನೆ. ಹಾಗೆ ಮಾಡುವಾಗ ತಾವು ಯಾವ ಪಕ್ಷದವರಿಗೂ ಕೂಡ ಯಾವ ರೀತಿಯಲ್ಲೂ ವೈತ್ಯಾನುಮಾಡದೆ ಒಂದೇ ರೀತಿಯಲ್ಲಿ ನಡೆದುಕೊಂಡಿದ್ದೀರಿ. ತಮಗೆ ಕಾನೂನು, ಕಾರ್ಯವಿಧಾನ ವಗೈರೆ, ಸಭಾ ನಡವಳಿಕೆ ಯಾವರೀತಿ ನಡೆಯಬೇಕೆಂಬುದು ಕರತಲಾಮಲಕವಾಗಿದೆ. ಆ ದೃಷ್ಟಿಯಿಂದ ತಾವು ಪುನಃ ಅಧ್ಯಕ್ಷರಾಗಿ ಚುನಾಯಿತರಾಗಿ ಬಂದಿರುವುದು ಅತ್ಯಂತ ಸಂತೋಷಕರವಾಗಿದೆ. ಮುಂದಿನ 5 ವರ್ಷಗಳೂ ಸಹ ಈ ಸಭೆಯ ಕಾರ್ಯಕಲಾಪಗಳನ್ನು ತಾವು ನಿಷ್ಪಕ್ಷಪಾತವಾಗಿ ಗಾಂಭೀರ್ಯದಿಂದ ಎಲ್ಲರಿಗೂ ಸಮರ್ಪಕವಾಗಿರುವ ರೀತಿಯಿಂದ ನಡೆಸಿಕೊಂಡು ಹೋಗುತ್ತೀರೆಂಬ ವಿಶ್ವಾಸ ನನಗೆ ಪೂರ್ಣವಾಗಿದೆ. ಇಷ್ಟು ಹೇಳಿ ನಾನು ಮತ್ತೊಮ್ಮೆ ತಮ್ಮನ್ನು ಅಭಿನಂದಿಸಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡುಹೋಗಬೇಕೆಂದು ಬೇಡಿಕೊಳ್ಳುತ್ತೇನೆ.

† ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಸ್ಪೀಕರ್, ಈ ಮಾನ್ಯ ಸಭೆಯ ಅಧ್ಯಕ್ಷರಾಗಿ ತಾವು ಚುನಾಯಿತರಾಗಿರುವುದು ಸಂತೋಷದ ವಿಚಾರ, ಇದನ್ನು ನಾನು ಹೃತ್‌ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಅಧ್ಯಕ್ಷರಾದವರು ನಿಷ್ಪಕ್ಷಪಾತವಾದ ರೀತಿಯಲ್ಲಿ ಯಾವ ಪಕ್ಷಗಳಿಗೂ ಅಂಟಿಕೊಳ್ಳದೆ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡುಹೋಗುವುದು ಸಾಮಾನ್ಯವಾಗಿ ಪಾಡಿಕೆಯಾಗಿದೆ. ಆದರೆ ಆಳುವ ಪಕ್ಷದವರು ಅಧ್ಯಕ್ಷರನ್ನು ಆರಿಸುವಾಗ ವಿರೋಧಪಕ್ಷದವರೊಡನೆ ಸಮಾಲೋಚನೆ ನಡೆಸಿ ಮುಂದುವರೆದಿದ್ದರೆ ಚೆನ್ನಾಗಿತ್ತು. ಹಾಗೆ ಮಾಡಿದ್ದರೆ ಬಹುಶಃ ಅವಿರೋಧವಾಗಿ ಆಯ್ಕೆಯಾಗುವ ಸಂಭವವಿತ್ತು. ಆಳುವ ಪಕ್ಷವು ಹಾಗೆ ಸಮಾಲೋಚನೆ ಮಾಡದೆ ತಮ್ಮ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದರು. ಆದುದರಿಂದ ವಿರೋಧ ಪಕ್ಷದವರು ಅನಿವಾರ್ಯವಾಗಿ ಈ ಚುನಾವಣೆ ರಂಗವನ್ನು ಪ್ರವೇಶಿಸಬೇಕಾಯಿತು. ಈಗ ಮದ್ರಾಸಿನ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ಅಲ್ಲಿ ಡಿ.ಎಂ.ಕೆ. ಪಕ್ಷವು ಅಧಿಕಾರದಲ್ಲಿದ್ದರೂ ಕೂಡ ಅದು ಒಂದು ಸೌಜನ್ಯವನ್ನು ತೋರಿಸಿ ವಿರೋಧ ಪಕ್ಷದವರಿಗೆ ಉಪಾಧ್ಯಕ್ಷ ಸ್ಥಾನವನ್ನು ಕೊಡುವ ಔದಾರ್ಯವನ್ನು ತೋರಿಸಿದೆ. ಅದು ಹಾಗಿರಲಿ. ಎಂದಿಗಿಂತಲೂ ಇಂದಿನ ವಾತಾವರಣದಲ್ಲಿ ಈ ಸಭೆಯು ಕಾರ್ಯಕಲಾಪಗಳನ್ನು ನಿಷ್ಪಕ್ಷಪಾತವಾಗಿ ನಡೆಸಿಕೊಂಡು ಹೋಗಬೇಕಾದ ಅವಶ್ಯಕತೆ ಹೆಚ್ಚಾಗಿ ಕಂಡುಬರುತ್ತಿದೆ. ತಾವು ಇದುವರೆಗೆ ನಿಷ್ಪಕ್ಷಪಾತವಾಗಿ ನಡೆದುಕೊಂಡು ಬಂದಿದ್ದೀರಿ. ತಮ್ಮನ್ನು ನಾನು ವೈಯಕ್ತಿಕವಾಗಿ ಬಲ್ಲೆ. ತಾವು ಎಲ್ಲರ ಮೆಚ್ಚುಗೆಗೆ ಪಾತ್ರರಾದರೂ ಕೂಡ ನನ್ನದೊಂದು ವಿಜ್ಞಾಪನೆಯಿದೆ. ತಾವು ಆಡಳಿತ ಪಕ್ಷಕ್ಕೆ ಸೇರಿದವರಾಗಿದ್ದೀರಿ.

ತಾವು ಯಾವ ಪಕ್ಷದ ಬೆಂಬಲವನ್ನು ಪಡೆದು ಆರಿಸಿ ಬಂದಿದ್ದೀರೋ ಆ ಪಕ್ಷಕ್ಕೆ ರಾಜೀನಾಮೆ ನಲ್ಲಿಸಿ ಪಕ್ಷಾತೀತರಾಗಿದ್ದು ಹೆಚ್ಚಿನ ಗೌರವ ಮತ್ತು ಈ ಸಭೆಯ ಆದರ, ಮನ್ನಣೆ ಈಗ ಯಾವ ರೀತಿ ಪಡೆಯುತ್ತಾ ಇದ್ದೀರೋ ಅದಕ್ಕಿಂತ ಇನ್ನೂ ಹೆಚ್ಚಿನ ಗೌರವ ಮನ್ನಣೆ ಪಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂದು ಹೇಳಿ ಪುನಃ ತಮ್ಮನ್ನು ವಿರೋಧ ಪಕ್ಷಗಳವರೆಲ್ಲರ ಪರವಾಗಿ ಮತ್ತು ವೈಯಕ್ತಿಕವಾಗಿ ಅಭಿನಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

---

† Indicates that the remarks or speeches have not been revised by the member concerned.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಗಳೇ, ಈ ಸಭೆಯ ಅಧ್ಯಕ್ಷರಾಗಿ, ಸಭಾಪತಿಗಳಾಗಿ ತಾವು ಚುನಾಯಿತರಾಗಿರುವುದಕ್ಕಾಗಿ ನನ್ನ ಅಭಿನಂದನೆಗಳನ್ನು ಅರ್ಪಿಸುತ್ತಾ ಈ ಸಭೆಯ ಘನತೆ, ಗೌರವ, ಪ್ರತಿಷ್ಠೆಗಳು ಕ್ರೋಢೀಕೃತವಾಗಿರತಕ್ಕ ಈ ಸ್ಥಾನವನ್ನು ತಾವು ಅಲಂಕರಿಸಿದ್ದೀರಿ ಎಂದು ನಾನು ಹೇಳುತ್ತೇನೆ. ಇಂತಹ ಮಹತ್ತರವಾದ ಸ್ಥಾನವನ್ನು ಅಲಂಕರಿಸಿರತಕ್ಕ ಕಾಲದಲ್ಲಿ ತಾವು ಈ ಸಭೆಯ ಘನತೆ, ಗೌರವವನ್ನು ಎತ್ತಿ ಹಿಡಿದು ಪ್ರಜಾಪ್ರಭುತ್ವದಲ್ಲಿ ಭಾರತದಲ್ಲೇ ಅತಿ ಶ್ರೇಷ್ಠವಾದ ಶಾಸನ ಸಭೆಯ ಹಕ್ಕನ್ನು, ಘನತೆಯನ್ನು ಇಡೀ ದೇಶಕ್ಕೇ ಮಾದರಿಯಾಗಿರತಕ್ಕ ರೀತಿಯಲ್ಲಿ ನಡೆಸಿಕೊಂಡು ಹೋಗತಕ್ಕ ಶಕ್ತಿ ತಮಗೆ ಬರಲಿ. ವಿರೋಧ ಪಕ್ಷಗಳು ಇಂತಹ ನಂದರ್ಭದಲ್ಲಿ ಎಂತಹ ಸ್ಥಾನವನ್ನು ಪಡೆದಿರಬೇಕೆಂಬುದನ್ನು ಒತ್ತಿ ಹೇಳಬೇಕಾದ ಪ್ರಮೇಯ ಇಲ್ಲ. ಇವತ್ತು ಪ್ರಜಾಪ್ರಭುತ್ವ ದೇಶದಲ್ಲಿ ಬಾಳಬೆಳಗಬೇಕಾಗಿದ್ದರೆ ತಾವು ತಮ್ಮ ಸ್ಥಾನದಲ್ಲಿ ಪಕ್ಷಾತೀತವಾಗಿದ್ದು, ಪಕ್ಷಾತೀತ ದೃಷ್ಟಿಕೋಣದಿಂದ ಶಾಸನ ಸಭೆಯ ಕಾರ್ಯಕಲಾಪಗಳನ್ನು ಮಾಡಿ, ಅದರ ಗೌರವ ಪ್ರತಿಷ್ಠೆಗಳನ್ನು ಎತ್ತಿ ಹಿಡಿಯಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಮೊದಲೇ ನಾನು ಒಂದು ಸೂಚನೆ ಕೊಟ್ಟಿದ್ದಂತೆ ಈ ಸಭಾಪತಿಗಳ ಸ್ಥಾನವನ್ನು ಪಕ್ಷೇತರರು ಯಾರು ಇರುತ್ತಾರೋ ಅವರನ್ನು ನರ್ವಾನುಮತದಿಂದ ಆರಿಸತಕ್ಕ ನತ್ಸಂಪ್ರದಾಯವನ್ನು ಬೆಳೆಸಬೇಕೆಂಬ ಭಾವನೆಯಿಂದ ಅವರಿಗೇ ಈ ಸ್ಥಾನವನ್ನು ಕೊಡಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಇವತ್ತು ತಾವು ಯಾವ ಪಕ್ಷದ ವತಿಯಿಂದ ಬಂದಿದ್ದೀರೋ ಆ ಪಕ್ಷವನ್ನು ದೂರೀಕರಿಸಿ ಪಕ್ಷಾತೀತವಾದ ದೃಷ್ಟಿಯನ್ನು ಪಡೆಯುವುದು ಬಹಳ ಕಷ್ಟವಾದ ಕೆಲಸ, ಆ ಕೆಲಸವನ್ನು ತಾವು ಮಾಡಿ ತೋರಿಸಿ ಈ ಸಭೆಯ ಗೌರವವನ್ನು ಕಾಪಾಡಬೇಕೆಂದು ಹೇಳಿ ನಾನು ಮತ್ತೊಮ್ಮೆ ತಮ್ಮನ್ನು ಅಭಿನಂದಿಸಿ ಸಭೆಯ ಗೌರವವನ್ನು ಕಾಪಾಡುತ್ತೀರಿ ಎಂಬ ನಂಬಿಕೆಯಿಂದ ನನ್ನ ಮಾತನ್ನು ಮುಗಿಸುತ್ತೇನೆ.

12-00 NOON

† ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ಮಾನ್ಯಸಭಾಪತಿಗಳೇ, ತಾವು ಈ ಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಈ ಸಭೆಗೆ ಅಧ್ಯಕ್ಷರಾಗಿ ಚುನಾಯಿತರಾಗುವುದು ಒಂದು ಸಂಪ್ರದಾಯ ಎಂದರೂ ಕೂಡ ಯಾರೊಬ್ಬರೂ ಅಧ್ಯಕ್ಷರಾಗುವುದಕ್ಕೆ ಇಷ್ಟಪಡುವುದಿಲ್ಲ. ಕಾರಣ ಇದು ಬಹಳ ಕಠಿಣವಾದ ಕೆಲಸ. ಆದಕಾರಣವೇ ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿಗೆ ಅಧ್ಯಕ್ಷರನ್ನು ಚುನಾವಣೆ ಮಾಡುವ ಕಾಲದಲ್ಲಿ ವಿಪರೀತ ಹಿಂಸೆಯಿಂದ ಒಬ್ಬರನ್ನು ಚುನಾವಣೆಮಾಡಿ ಆ ಅಧ್ಯಕ್ಷ ಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ನಿರ್ದಾಕ್ಷಿಣ್ಯವಾಗಿ, ನಿಷ್ಪಕ್ಷಪಾತವಾಗಿ ಮಾಡತಕ್ಕ ಈ ಕೆಲಸವಿದೆಯಲ್ಲಾ ಇದು ಬಹಳ ಕಠಿಣತರವಾದ ಕೆಲಸ. ಇಂತಹ ಒಂದು ಕೆಲಸವನ್ನು ಮಾಡಲಿಕ್ಕೆ ತಾವು ಈ ಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದೀರಿ. ನ್ಯಾಯ, ನಿಷ್ಠೆಯಿಂದ ನಿಷ್ಪಕ್ಷಪಾತವಾಗಿ ಇದನ್ನು ಮಾಡುತ್ತೇನೆ ಎಂದು ಹೇಳಿದರೆ ಸಾಲದು, ಮಾಡಿದರೂ ಸಾಲದು, ಮಾಡುವಂತೆ ಎಲ್ಲಾ ಜನರಿಗೂ ಕಾಣಬೇಕು ಎನ್ನುವ ತಕ್ಕದ್ದು ಬಹಳ ಮುಖ್ಯವಾದ ಅಂಶ. ಹಾಗೆ ಮಾಡಬೇಕಾದರೆ ಸಾಮಾನ್ಯವಾಗಿ ಪಕ್ಷಾತೀತರಾಗಿ ಇರಲೇಬೇಕು. ಒಂದು ಪಕ್ಷದ ಸದಸ್ಯನಾಗಿದ್ದುಕೊಂಡು ಯಾರೂ ನಿರ್ದಾಕ್ಷಿಣ್ಯವಾಗಿ, ನಿಷ್ಪಕ್ಷಪಾತದಿಂದ ಕೆಲಸ ಮಾಡುವುದು ಕಷ್ಟತಮವಾದದ್ದು. ಈಗ ಮಾನ್ಯ ಸ್ನೇಹಿತರು ಹೇಳಿದಂತೆ ಇಂತಹ ಒಂದು ಸಭೆಯ ಅಧ್ಯಕ್ಷರಾಗಿದ್ದುಕೊಂಡು ನೀತಿ, ನಿಯಮ, ನಿಷ್ಠೆ, ಸಭೆಯ ಗೌರವ ಹಾಗೂ ಸದಸ್ಯರ ಗೌರವ, ಹಾಗೂ ಅವರ ಹಕ್ಕುಬಾಧ್ಯತೆಗಳು ಇವೆಲ್ಲವನ್ನೂ ಕಾಪಾಡುವುದು ಅಲ್ಲದೆ ಕಾಪಾಡುವಂತೆ ಕಾಣುವಂತೆ ಮಾಡುವುದು ಬಹಳ ಅವಶ್ಯಕವಿರುವುದರಿಂದ ತಾವು ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡು ಪಕ್ಷಾತೀತರಾಗಿ ಯಾವ ಪಕ್ಷದಲ್ಲೂ ನಾನು ಇಲ್ಲ ಅನ್ನುವಂತಹದು ಎದ್ದು ಕಾಣುವಂತೆ ಮಾಡಿ ಈ ಸಭೆಯ ಕೆಲಸವನ್ನು ಎಲ್ಲರಿಗೂ ಸಮರ್ಪಕವಾಗುವಂತೆ ಮಾಡುತ್ತೀರಿ ಎಂದು ನಂಬಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

Sri H. SIDDAVEERAPPA (Harihar).—Mr. Speaker, Sir, while associating myself with what has been said by my friends on this side on your elevation as the Speaker of this august House, I would like to bring to your kind notice what we, on this side of the House, expect of you and what we expect you to do under the peculiar circumstances in this country.

As we all know, in this general election in various States in India, Opposition parties have come to power and Opposition parties also have been represented in a substantial number. Even in this House we are ninety in number and that is not an inconsiderable number. We are here to represent and express what we feel the country expects of us. In this arduous task, some times tempers may be frayed, some times it may be very difficult to keep a balance of mind and some times seemingly it may appear that we are going out of the way. If that were so, it is no doubt your duty to call us to order. But at the same time you must also feel that the moment you are elected as the Speaker to this august House you represent all of us. We require greater protection at your hands than the treasury benches. Therefore it has been stated in the May's Parliamentary Practice that "the Speaker represents the House itself in its powers, proceedings and dignity." He represents all of us. Therefore, sir on any occasion when we come to you for any assistance or when we seek your protection, I am sure it will come forward in an abundant measure. That is why it has also been stated in the same book "while we submit ourselves willingly to the various standing orders, rules of procedures and various other limitations that limit the privileges of speaking in this House"—As you know these standing orders are meant to regulate the business of this House but we willingly subordinate ourselves in the ardent belief that you Sir, as the custodian of the powers and privileges of this House, will exercise these rights in such a manner as not to give any cause for grievance from any side of the House. I may also say "that in the face of conflicting claims the drastic powers of curtailing debate entrusted to the Speaker by the standing orders would be hard to justify but for the confident belief that they will be exercised with a discretion trained in the spirit of the traditional practice". I may also read another passage. "Confidence in the impartiality of the Speaker is an indispensable condition of the successful working of procedure, and many conventions exist which have as their object not only to ensure the impartiality of the Speaker but also to ensure that his impartiality is generally recognised". As my, learned friends put it and as we all know, Justice is not only to be done but seem to be done. Therefore as has been stated by my friends, it is a bed of thorns ; it is such a crown that you have worn. It is by enormous amount of patience that you have to bear with us when we are emotionally upset. When we place forward a problem, you will have to bear with us and lead us. In this ardent belief, Sir, I welcome you to this Chair.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾನನ).—ಮಾನ್ಯ ಸಭಾಪತಿಗಳೀ, ತಮ್ಮನ್ನು ಈ ದಿವಸ ಈ ಮಾನ್ಯ ಸಭೆಯವರು ಈ ಸಭೆಯ ಅಧ್ಯಕ್ಷಸ್ಥಾನಕ್ಕೆ ಆರಿಸಿದುದಕ್ಕಾಗಿ ನಾನು ನಮ್ಮ ಪರವಾಗಿ ತಮಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಈಗಾಗಲೇ ನಮ್ಮ ಮಾನ್ಯ ಮಿತ್ರರು ಹೇಳಿದಂತೆ ಈ ಅಧ್ಯಕ್ಷಪದವಿಯು ಒಂದು ಮುಳ್ಳಿನ ಕಿರೀಟವಿದ್ದಂತೆ. ಆದರೂ ಅದನ್ನು ನಿರ್ವಹಿಸಲು ತಮ್ಮ ತರೆ ಗಟ್ಟಿಯಾಗಿದೆ ಹಾಗೂ ಅದಕ್ಕೆ ಶಕ್ತಿಯಿದೆ. ಅದರೆ ಅಧ್ಯಕ್ಷಸ್ಥಾನದಲ್ಲಿರತಕ್ಕವರು ಯಾವತ್ತೂ ವಿರೋಧಪಕ್ಷದವತಿಯಿಂದ ಬಂದಿರತಕ್ಕವರ ವಿಚಾರದಲ್ಲಿ ಸಹಕಾರಭಾವನೆಯಿಂದ ಇರುವರೆಂಬ ಆಸೆ ನಮಗಿದೆ. ನಾವು ಇಲ್ಲಿ ವಿರೋಧಪಕ್ಷದವರಿರುವುದು ಕೇವಲ ಸರ್ಕಾರಿಬೆಂಚಿನಲ್ಲಿರುವವರನ್ನು

(ಶ್ರೀ ಎಚ್. ಬಿ. ಹ್ಯಾಲನಯ್ಯ)

ವಿರೋಧಿಸಬೇಕೆಂದಲ್ಲ, ನಾವು ಇಲ್ಲಿಗೆ ಬಂದಿರತಕ್ಕದ್ದು ದೇಶದ ಕಾರ್ಯಕಲಾಪಗಳು ಸುಗಮವಾಗಿ ಮುಂದುವರಿಯುವಂತೆ ಮಾಡಬೇಕೆಂಬುದೇ ನಮ್ಮ ಉದ್ದೇಶ. ಆದರೆ ಈ ದಿವಸ ತಮ್ಮನ್ನು ಈ ಅಧ್ಯಕ್ಷಸ್ಥಾನಕ್ಕೆ ಚುನಾವಣೆಮಾಡಬೇಕಾದ ಪ್ರಸಂಗ ಬಂದುದಕ್ಕಾಗಿ ನಾನು ವಿಷಾದಿಸುತ್ತೇನೆ. ಈ ಕಾರ್ಯವು ಅವಿರೋಧವಾಗಿ ನಡೆಯಬೇಕಾಗಿತ್ತು. ಹಾಗೆ ನಡೆದಿದ್ದರೆ ಚೆನ್ನಾಗಿತ್ತು. ಆದರೆ ಸರ್ಕಾರದವರು ಈ ವಿಚಾರದಲ್ಲಿ ವಿರೋಧಪಕ್ಷದವರೊಂದಿಗೆ ವಿಚಾರ ವಿನಿಮಯ ಮಾಡಬೇಕಾಗಿತ್ತು; ಅದನ್ನು ಅವರು ಮಾಡಲಿಲ್ಲ. ಸರ್ಕಾರದವರು ಈ ಬಗ್ಗೆ ತಳೆದ ಧೋರಣೆಯಿಂದ ನಾವು ನಮ್ಮ ಕರ್ತವ್ಯವನ್ನು ಮಾಡಬೇಕಾಗಿ ಬಂದಿತು. ಆದರೆ ಈ ದಿವಸ ತಾವು ಧರ್ಮದೇವತೆಯ, ನ್ಯಾಯ ದೇವತೆಯ ಸ್ಥಾನವನ್ನು ಅಲಂಕರಿಸಿದ್ದೀರಿ. ನಾವೆಲ್ಲರೂ ತಮಗೆ ಕೃತಜ್ಞರಾಗಿದ್ದೇವೆ. ತಮ್ಮ ಅಧ್ಯಕ್ಷತೆಯಲ್ಲಿ ಈ ಸಭೆಯು ಎಲ್ಲ ಕಾರ್ಯಕಲಾಪಗಳಲ್ಲೂ ನ್ಯಾಯ, ಧರ್ಮಗಳಿಂದ ದೂರಸರಿಯದೆ ಅವುಗಳನ್ನು ಕಾಪಾಡಿಕೊಂಡು ಬರುತ್ತೀರೆಂದು ಆಶಿಸಿ ನಾನು ತಮಗೆ ಮತ್ತೊಮ್ಮೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಅಧ್ಯಕ್ಷರೇ, ಮಹೋವ್ಯದ್ಧರು ಮತ್ತು ಹ್ಯಾನ್ ವ್ಯದ್ಧರೂ ಅದಗ್ಗೂ ತಾವು ಎರಡನೆಯ ಸಾರಿ ಈ ಸಭೆಯ ಅಧ್ಯಕ್ಷಸ್ಥಾನಕ್ಕೆ ಚುನಾಯಿತರಾದುದ ಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ನಾವು ಈ ದಿವಸ ಒಂದು ನೇಮಕ್ಕಾಗಿ ಕಟ್ಟುಬಿದ್ದು ವಿರೋಧ ಪಕ್ಷದವರು ಈ ಸಭೆಯ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಬೇಕಾಯಿತು. ತಾವು ಈ ದವಸ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡನಂತರ ತಾವು ಪಕ್ಷತೀತಕ್ಕಾಗಿ ನಿಷ್ಪಕ್ಷಪಾತದಿಂದ ಈ ಸಭೆಯು ಕಾರ್ಯ ಕಲಾಪಗಳನ್ನು ನಡೆಸುವಿರಿ ಎಂಬ ನಂಬಿಕೆ ನಮಗಿದೆ. ತಮ್ಮ ಅಧ್ಯಕ್ಷತೆಯಲ್ಲಿ ದೇಶದಲ್ಲಿರತಕ್ಕ ಜನರ ಆಶೆ ಆಕಾಂಕ್ಷೆಗಳನ್ನು ಈಡೇರಿಸುವಂತೆ ಈ ಸಭೆಯ ಕಾರ್ಯಕಲಾಪಗಳು ನಡೆದು ತಮ್ಮ ಅಧ್ಯಕ್ಷತೆಯು ಇಡೀ ಭರತಖಂಡಕ್ಕೇ ಒಂದು ಅದ್ವಿತೀಯವಾದ ಮಾರ್ಗದರ್ಶನವನ್ನುಂಟುಮಾಡುವಂಥ ಸ್ಥಾನಮಾನ ವನ್ನು ಮೈಸೂರು ವಿಧಾನ ಸಭೆಯು ಗಳಿಸುವಂತೆ ಮಾಡುತ್ತೀರೆಂದು ಆಶಿಸಿ ತಮಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಿ ಮತ್ತೊಮ್ಮೆ ತಮಗೆ ನನ್ನ ಅಭಿನಂದನೆಗಳನ್ನೂ ಸಲ್ಲಿಸುತ್ತೇನೆ.

† **Sri B. P. KADAM** (Karwar).—Mr. Speaker, I respectfully desire to congratulate you on my behalf and on behalf of our group. In fact your election this time is no surprise. When I read reports in the newspapers a few months back, it was a foregone conclusion. I respectfully desire that you should continue again as Speaker of this House and not as a Minister in this Government, for a Minister's job is the easiest possible one on the earth, and the Speaker's job in the present circumstances in India is a very hard job. It is not a bed of roses. The Speaker requires a good deal of legal acumen, disciplined mind and analytical thinking and a mind capable of demarcating which is right and which is wrong and sometimes capable of taking very hard decisions. We all know that you are most fitted for this job and my humble opinion during the past five years has been that you have discharged your duties in a most befitting manner. Of course I had a few encounters during the last few years but those skirmishes have been almost a passing phase and they were extremely limited in magnitude. I may say that they were forgotten very easily. Any way my respect for you has been greater during the last five years and my admiration for you has been enhanced. I have not the least doubt that you would continue to guide the deliberations in a most dignified and disciplined manner and you would take every section of this House into confidence and carry on the activites in a most lively and firm manner. I desire and pray that you may have strength to carry on the activities in a firm manner and in a disciplined manner

because any amount of indiscipline and disrespect can never be tolerated. We have experience of some legislatures where democracy has been put to a severe test. We have to restrain ourselves to see that we fare well in democracy and it must be proved by our activities by having a restrained behaviour. I respectfully desire that you may have the necessary strength to carry on that hard job. With these words, I close my speech.

† ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಅವಿರೋಧವಾಗಿ ಆಯ್ಕೆಯಾಗುವ ಬದಲು ಕಾರಣಾಂತರಗಳಿಂದ ಚುನಾವಣೆ ನಡೆಯಬೇಕಾಗಿ ಬಂತು ಮತ್ತು ನಾವು ಆಳುವ ಪಕ್ಷದಿಂದ ಬಹುಮತದಿಂದ ಆರಿಸಿ ಬಂದಿದ್ದೀರಿ. ಆದರೆ ಈಗ ಅಧ್ಯಕ್ಷ ಸ್ಥಾನಕ್ಕೆ ಬಂದಮೇಲೆ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳ ಅಧ್ಯಕ್ಷರಾಗಿದ್ದೀರಿ. ಆದರೂ ಕುಂಬಾರನ ಕನಬು ನದಾ ಮಣ್ಣಿನಲ್ಲಿರುವುದು. ಅವನು ಹೊರಗೆ ಬರುವಾಗ ಕಂಚಿತ್ತೂ ಮಣ್ಣಿಲ್ಲದೆ ಬರುವುದಕ್ಕಾಗುವುದಿಲ್ಲ. ತಾವು ಈಗ ಅಧ್ಯಕ್ಷಸ್ಥಾನದಿಂದ ಆಳುವ ಮತ್ತು ವಿರೋಧಪಕ್ಷವನ್ನು ಸಮಾನತೆಯಿಂದ, ನಿಷ್ಪಕ್ಷಪಾತದಿಂದ ಕಂಡು, ನಿಜವಾದ, ನ್ಯಾಯಸಮ್ಮತವಾದ ರೀತಿಯಲ್ಲಿ, ನಮಗೆಲ್ಲ ಹೆಚ್ಚಿನ ರೀತಿಯ ನದವಕಾಸವನ್ನು ಕಲ್ಪಿಸಿಕೊಡುತ್ತೀರಿ ಎಂದು ಭಾವಿಸಿ, ತಮಗೆ ವಂದನೆಯನ್ನು ಅರ್ಪಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ತಮಗೆ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ವಂದನೆಯನ್ನು ಸಲ್ಲಿಸುತ್ತೇನೆ. ಅದೇ ಸಮಯದಲ್ಲಿ ನಾವು ಕೆಲವರು ಇಲ್ಲಿ ಹೊಸದಾಗಿ ಕಾಲಿಟ್ಟಿದ್ದೇವೆ. ಇಂತಹ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಈಗಾಗಲೇ ಮಾತನಾಡಿದ ಎಲ್ಲರೂ ಇಲ್ಲಿಯೆ ನುರಿತಂತಹ ಮಿತ್ರರು ಇಲ್ಲಯ ರೂಲಿಂಗ್ ಏನು ಪ್ರೊಸೀಜರ್ ಏನು ಎಂಬುದನ್ನು ತಿಳಿದಂತವರು. ಆದರೆ ನಾನು ತಮಗೆ ಹೇಳಬಯಸುವುದೇನೆಂದರೆ, ಈ ಸಂದರ್ಭದಲ್ಲಿ ತಮ್ಮ ಕರ್ತವ್ಯ, ಮತ್ತು ಜವಾಬ್ದಾರಿ ಬಹಳ ಗುರುತರವಾದದು. ತಾವು ಎಲ್ಲರನ್ನೂ ನೋಡುವ ಹಾಗೆ ವಿರೋಧ ಪಕ್ಷವನ್ನೂ ನೋಡಕೂಡದು ಎಂದು ನನ್ನ ನವಿನಯ ಪ್ರಾರ್ಥನೆ. ಏಕೆಂದರೆ, ತಮ್ಮ ಜವಾಬ್ದಾರಿ ನಿಷ್ಪಕ್ಷವಾಗಿರಬೇಕು. ಅಷ್ಟೇ ಅಲ್ಲ ತಮ್ಮ ಬಗ್ಗೆ ನನಗೆ ತುಂಬಾ ಗೌರವವೂ ಇದೆ. ತಮ್ಮ ಹಲವಾರು ರೂಲಿಂಗ್‌ಗಳನ್ನು ನಾನು ಓದಿದ್ದೇನೆ ಮತ್ತು ತಿಳಿದುಕೊಂಡಿದ್ದೇನೆ. ಕೆಲವು ಕಹಿಯಾದ ವಾತಾವರಣ ಉಂಟಾದ ಸಂದರ್ಭದಲ್ಲಿ ತಾವು ಬಹಳ ಕಠಿಣವಾಗಿ ವರ್ತಿಸಿದ್ದೀರಿ. ನದಸ್ಯರಲ್ಲೂ ಸಹ ಕೆಲವರು ಕಠಿಣವಾಗಿ ಮಾತನಾಡಿದ್ದಾರೆ. ಒಟ್ಟಿನಲ್ಲಿ ನಾವೆಲ್ಲರೂ ಸ್ನೇಹಿತರು ಎಂದು ನೋಡಬೇಕು, ಮತ್ತು ತಾವು ಘನತೆ ಗೌರವಗಳನ್ನು ಹೆಚ್ಚಿಸಿಕೊಂಡಂತಹ ಅಧ್ಯಕ್ಷರಾಗಿದ್ದೀರಿ. ತಾವು ವಿರೋಧ ಪಕ್ಷದವರೇ ಆಗಲಿ, ಅಥವಾ ಆಳುವ ಪಕ್ಷದವರೇ ಆಗಲಿ, ಎಲ್ಲರನ್ನೂ ಒಳ್ಳೆಯ ರೀತಿಯಿಂದ ಮುಂದೆಯೂ ಕೂಡ ನೋಡಿಕೊಂಡು ಬರುತ್ತೀರಿ ಎಂಬ ನಂಬಿಕೆ ಇದೆ. ಅದಲ್ಲದೆ ನಾವೀಗ 90 ಜನರಿದ್ದೇವೆ. ಬೇರೆ ಬೇರೆ ಪಕ್ಷಗಳವರಾಗಿದ್ದೇವೆ. ಇಂಥ ಸಂದರ್ಭದಲ್ಲಿ ತಾವು ಸರಿಯಾದ, ಸಮಾನ ಅವಕಾಶವನ್ನು ಕೊಟ್ಟು ನೋಡುತ್ತೀರಿ ಎಂದು ನಂಬಿದ್ದೇನೆ. ಮತ್ತು ಆ ರೀತಿ ವರ್ತಿಸಿ ನಿಜವಾಗಿ ರಾಜ್ಯದ ವಿಧಾನ ಸಭೆ ನಮ್ಮ ದೇಶದಲ್ಲಿ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವ ಹಾಗೆ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಪ್ಪ (ಬೀರೂರು).—ಮಾನ್ಯ ಅಧ್ಯಕ್ಷರೇ, ಆಳುವ ಪಕ್ಷದ ವತಿಯಿಂದ ಆದ ತಮ್ಮ ಆಯ್ಕೆಯಾದುದಕ್ಕಾಗಿ ತಮ್ಮನ್ನು ಸ್ವಾಗತಿಸುತ್ತೇನೆ ಮತ್ತು ಅಭಿನಂದಿಸುತ್ತೇನೆ. ತಾವು ಕಳೆದ ಐದು ವರ್ಷದಿಂದಲೂ ಎಲ್ಲರ ಪ್ರಶಂಸೆಗೆ ಒಳಗಾಗಿದ್ದೀರಿ ಮತ್ತು ದಕ್ಷತೆಯಿಂದ ವಿಧಾನ ಸಭೆಯನ್ನು ನಡೆಸಿಕೊಂಡು ಬಂದಿದ್ದೀರಿ. ಅನೇಕರು ಹೇಳಿದಂತೆ, ನ್ಯಾಯವನ್ನು ನಿಷ್ಪಕ್ಷಪಾತದಿಂದ, ನೀತಿಯುತವಾದ ರೀತಿಯಿಂದ ನಡೆಸಿಕೊಂಡು ಬಂದಿದ್ದೀರಿ. "You have legal acumen. Justice must be done and it must be seemingly done" ಎಂಬುದನ್ನು ತಾವು ಮನಸ್ಸಿನಲ್ಲಟ್ಟುಕೊಂಡು ವಿರೋಧ ಪಕ್ಷ ಆಳುವ ಪಕ್ಷ ಎಂಬ ಭೇದಭಾವವಿಲ್ಲದೆ ಹೊಂದಾಣಿಕೆಯಿಂದ ಕೆಲಸ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಎಸ್. ಎಸ್. ಅರಕೇರಿ (ಬಬ್ಲೋಳಿ).—ಮಾನ್ಯ ಅಧ್ಯಕ್ಷರೇ, ತಾವು ಅಧ್ಯಕ್ಷರಾಗಿ ಆರಿಸಿ ಬಂದುದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಬೆಂಗಳೂರು ನಗರದಲ್ಲಿ ನಾಲ್ಕು ವರ್ಷಗಳಿಂದ ವಕೀಲನಾಗಿ ಕೆಲಸಮಾಡುತ್ತಿದ್ದೇನೆ. ಒಂದು ಚಾರಿ ರವೀಂದ್ರ ಕರಾ

(ಶ್ರೀ ಎಸ್. ಎಸ್. ಅರಕೇರಿ)

ಕ್ಷೇತ್ರದಲ್ಲಿ ಡಾಕ್ಟರ್ ಅಂಬೇಡ್ಕರ್‌ರವರ ಹುಟ್ಟು ದಿನಾಚರಣೆಯನ್ನು ಆಚರಿಸಿದ ಸಂದರ್ಭದಲ್ಲಿ ತಾವು ಅಂಬೇಡ್ಕರ್‌ರವರ ವಿಚಾರದಲ್ಲಿ ಹೇಳಿದಂತಹ ವಿಷಯಗಳು ಅಲ್ಲಿ ನೆರೆದಿದ್ದಂತಹ ಸಾವಿರಾರು ಜನರ ಮನ್ನಣೆಯನ್ನು ಪಡೆದು ಕರತಾಡನಗಳನ್ನು ಗಳಿಸುವಂತಾಯ್ತು. ನಾಲ್ಕು ವರ್ಷಗಳಿಂದ ನಾನು ನೋಡಿದಂತೆ ತಾವು ತರಣರಿಗೆ ಮುಂದೆ ಬರುವ ಒಂದು ಅವಕಾಶವನ್ನು ಇಲ್ಲಯವರೆಗೆ ಕೊಡುತ್ತಾ ಬಂದಿದ್ದೀರಿ. ಅದೇ ರೀತಿ ಇನ್ನು ಮುಂದೆಯೂ ತಾವು ವಿರೋಧ ಪಕ್ಷದವರಿಗೆ, ಹಾಗೂ ಆಳುವ ಪಕ್ಷದವರಿಗೆ, ಸರಿಯಾದ ನ್ಯಾಯವನ್ನು ಒದಗಿಸಿಕೊಡಬೇಕೆಂದು ಪ್ರಾರ್ಥಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಭಾರತೀಯ ಜನಸಂಘವು ಮೊಟ್ಟಮೊದಲನೆಯದಾಗಿ ಮೈಸೂರು ಅಸೆಂಬ್ಲಿಯನ್ನು ಪ್ರವೇಶಿಸುತ್ತಿರುವುದು. ತಾವು ಅಧ್ಯಕ್ಷರಾಗಿ ಆರಿಸಿ ಬಂದಿರುವುದು ಬಹಳ ಸಂತೋಷಕರವಾದ ಸಂಗತಿ. ತಮ್ಮ ಘನತೆ ಗಾಂಭೀರ್ಯಗಳನ್ನು ಮತ್ತು ತಾವು ನಿಷ್ಪಕ್ಷಪಾತದಿಂದ ವರ್ತಿಸುತ್ತಿರುವುದನ್ನು ನಾನು ಕೇಳಿದ್ದೇನೆ. ಇಲ್ಲಿ ತಾವು ತೆಗೆದುಕೊಳ್ಳುವ ತಕ್ಕಂತಹ ನಿರ್ಣಯ ಯಾವ ರೀತಿಯಿಂದಲಾದರೂ ಕೂಡ ಪಕ್ಷಪಾತವಾಗಿರಬಾರದು ಮತ್ತು ಇನ್ನು ಮುಂದೆಯೂ ವಿರೋಧ ಪಕ್ಷಕ್ಕೆ ಯೋಗ್ಯ ಸಮಯವನ್ನು ಕೊಡುತ್ತಿರಬೇಕು. ಈಗ ನಾವು ನಾಲ್ಕು ಜನ ನಮ್ಮ ಪಕ್ಷದ ವತಿಯಿಂದ ಆರಿಸಿ ಬಂದಿದ್ದೇವೆ. ಈ 90 ಜನರಲ್ಲಿ ನಾವು ಸಹ ಸೇರಿದ್ದೇವೆ. ಆದ್ದರಿಂದ ನಮ್ಮೆಲ್ಲರನ್ನೂ ನಿಷ್ಪಕ್ಷಪಾತದಿಂದ ನೋಡಿಕೊಂಡು ಇರಬೇಕೆಂದು ಪ್ರಾರ್ಥಿಸಿ, ತಮಗೆ ವಂದನೆಯನ್ನು ಸಲ್ಲಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ತಮ್ಮನ್ನು ನಾನು ಬಹಳ ಆತ್ಮೀಯವಾಗಿ ಅಭಿನಂದಿಸುತ್ತೇನೆ. ನಾನು ಇಲ್ಲಿಗೆ ಒಬ್ಬ ಹೋರಾಟಗಾರನಾಗಿ ಬಂದಿದ್ದೇನೆ. ಅನೇಕ ಸಲ ತಮ್ಮ ಎದುರಿಗೆ ನಾನು ಹೋರಾಟ ಮಾಡತಕ್ಕ ಸಂದರ್ಭವನ್ನು ತಾವು ನೋಡಿದ್ದೀರಿ. ಈ ಹೋರಾಟವು ಸರ್ಕಾರದ ವಿರುದ್ಧವಾಗಿದೆ. ಇನ್ನು ಐದು ವರ್ಷಗಳ ಕಾಲ ಪ್ರಚಂಡ ಹೋರಾಟವನ್ನು ಸರ್ಕಾರದ ವಿರುದ್ಧ ಮಾಡಬೇಕಾಗಿದೆ. ನಮಗೆ ಸೌಜನ್ಯದಿಂದ ನ್ಯಾಯವನ್ನು ದೊರಕಿಸಿಕೊಡುವಂತಾದ ಭಾರ ತಮ್ಮದೇ ಆಗಿದೆ. ತಮ್ಮ ಅಧಿಕಾರವನ್ನು ದುರುಪಯೋಗಪಡಿಸಲಿಕ್ಕೆ ಆಡಳಿತ ಪಕ್ಷದವರು ಪ್ರೋತ್ಸಾಹಿಸಬಹುದು. ಅದಕ್ಕೆ ತಾವು ಎಡೆ ಕೊಡದೆ 5 ವರ್ಷಗಳಲ್ಲೂ ನ್ಯಾಯ, ಧರ್ಮವನ್ನು ಕಾಪಾಡಿಕೊಂಡು ಬರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದ್ದರಿಂದ ನನಗೆ ಯಾವುದೇ ರೀತಿಯ ಆತಂಕ ತರದೆ, ಪದೇ ಪದೇ ಕುಳಿತುಕೊಳ್ಳಿ, ಎಂದು ಹೇಳದೆ, ನಮ್ಮ ಹೋರಾಟಕ್ಕೆ ತಾವು ಬೆಂಬಲ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿಸಿ).—ಸನ್ಮಾನ್ಯ ಅಧ್ಯಕ್ಷರೇ, ಈ ಪವಿತ್ರವಾದ ದಿನ ತಾವು ಈ ಪವಿತ್ರವಾದ ಸ್ಥಾನಕ್ಕೆ ಚುನಾಯಿತರಾಗಿದ್ದೀರಿ. ಆಳುವ ಪಕ್ಷದ ವತಿಯಿಂದ ತಾವು ಚುನಾಯಿತರಾದರೂ, ವಿರೋಧಪಕ್ಷದ ಹಿತದೃಷ್ಟಿಯಿಂದ, ಪ್ರಜಾಪ್ರಭುತ್ವದ ಬೆಳವಣಿಗೆಯ ಹಿತದೃಷ್ಟಿಯಿಂದ, ಸರ್ವ ತಂತ್ರ ಸ್ವತಂತ್ರ ರಾಷ್ಟ್ರದ ಪ್ರಜೆಗಳಾದ ನಾವು ಸುಭದ್ರ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ಬೆಳೆಸಿಕೊಂಡು ಹೋಗಬೇಕಾದರೆ, ವಿರೋಧ ಪಕ್ಷಗಳಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕು. ಇವತ್ತಿನ ದಿವಸ ವಿರೋಧ ಪಕ್ಷವು 90 ಸ್ಥಾನಗಳನ್ನು ಪಡೆದು ಒಂದು ಹೆಚ್ಚಿನ ಶಕ್ತಿಯನ್ನು ಬೆಳೆಸಿದೆ. ಪ್ರಜಾಪ್ರಭುತ್ವದ ರಕ್ಷಣೆಗಾಗಿ ತಾವು ಹೆಚ್ಚಿನ ಅವಕಾಶವನ್ನು ವಿರೋಧ ಪಕ್ಷದವರಿಗೆ, ಒದಗಿಸಿಕೊಡಬೇಕು.

ಇಂಥಾ ಒಂದು ವಾತಾವರಣವನ್ನು ತಾವು ಕಲ್ಪಿಸುತ್ತೀರೆಂದು ನಾನು ನಂಬಿದ್ದೇನೆ. ಈ ದಿವಸ ತಾವು 123 ವೋಟುಗಳಲ್ಲಿ ಅಧಿಕಾರವರ್ಗದವರಿಂದ ಸಾಕಷ್ಟು ಬಹುಮತದಿಂದ ಚುನಾಯಿತರಾಗಿದ್ದೀರಿ. ಈ ಚುನಾವಣೆಗೆ ವಿರೋಧವಾಗಿ ವಿರೋಧಪಕ್ಷದವರು 83 ವೋಟುಗಳನ್ನು ವ್ಯಕ್ತಪಡಿಸಿರುವುದನ್ನು ನೋಡಿದರೆ ನಮ್ಮ ವಿರೋಧಪಕ್ಷದವರಲ್ಲಿ ಒಗ್ಗಟ್ಟು ಎಷ್ಟರಮಟ್ಟಿಗೆ ಇದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ನಮ್ಮ ವಿರೋಧಪಕ್ಷದವರ ಒಗ್ಗಟ್ಟನ್ನು ತಾವು ರಕ್ಷಿಸಬೇಕು. ಅದಕ್ಕಾಗಿ ನಮ್ಮೆಲ್ಲರಿಗೂ ಮಾತನಾಡುವುದಕ್ಕೆ ತಾವು ಹೆಚ್ಚಿನ ಅವಕಾಶವನ್ನು ಕೊಡಬೇಕು. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ತಾವು ಈ ಗದ್ದುಗೆಯಲ್ಲಿ ಈ 5 ವರ್ಷಗಳ ಅವಧಿಯವರೆಗೂ ಇರಬೇಕು. ಅಂಥಾ ಒಂದು ಶಾಂತ ವಾತಾವರಣವನ್ನು ತಾವು ಕಲ್ಪಿಸಬೇಕು. ಯಾವ ಉಪ ಚುನಾವಣೆಗಳೂ ಮತ್ತು ಚುನಾವಣೆಗಳೂ ಬಾರದಂತಹ ಒಂದು ಶಾಂತ ವಾತಾವರಣ

ವನ್ನು ಕಲ್ಪಿಸಬೇಕು. ವಿರೋಧ ಪಕ್ಷದ ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಹೆಚ್ಚು ಅವಕಾಶ ವನ್ನು ಕೊಟ್ಟು ನಮ್ಮ ಅಭಿಪ್ರಾಯವನ್ನು ಜನತೆಯ ಮುಂದೆ ಇಡಲು ನಮಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕು. ವೈಯ್ಯಕ್ತಿಕವಾದ, ಸಾಮೂಹಿಕವಾದ ವಿರೋಧಪಕ್ಷದ ಎಲ್ಲಾ ಸದಸ್ಯರುಗಳ ಪರವಾಗಿ ನನ್ನ ಅಭಿನಂದನೆಗಳನ್ನು ತಮಗೆ ಅರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್ (ಗದಗು).—ಸನ್ಮಾನ್ಯ ಸಭಾಪತಿಗಳೇ, 216 ಜನ ಶಾಸಕರಿರುವ ಈ ಮಾನ್ಯ ಸಭೆಯಲ್ಲಿ 121 ಜನ ಸದಸ್ಯರ ಬಹುಮತವನ್ನು ಗಳಿಸಿ ಈ ಸಭೆಯ ಅಧ್ಯಕ್ಷರ ಸ್ಥಾನಕ್ಕೆ ಚುನಾಯಿತರಾಗಿರುವ ತಮ್ಮನ್ನು ವಿರೋಧ ಪಕ್ಷದವರ ಪರವಾಗಿ ಸ್ವಾಗತಿಸಲು ನನಗೆ ಬಹಳ ಸಂತೋಷವಾಗುತ್ತದೆ. ಇದಕ್ಕಿಂತಲೂ ಇನ್ನು ಹೆಚ್ಚು ಬಹುಮತದಿಂದ ತಾವು ಈ ಸ್ಥಾನಕ್ಕೆ ಆಯ್ಕೆಯಾಗಿದ್ದರೆ ನಮಗೆ ಇನ್ನೂ ಹೆಚ್ಚು ಸಂತೋಷವಾಗುತ್ತಿತ್ತು. ಆದಳಿತ ಪಕ್ಷದಲ್ಲಿರುವ ತಮ್ಮನ್ನು ಆದಳಿತಪಕ್ಷದವರು ಮತ್ತೆ ಈ ಅಧ್ಯಕ್ಷರ ಸ್ಥಾನಕ್ಕೆ ತಮ್ಮನ್ನೇ ಆಯ್ಕೆ ಮಾಡಿದ್ದಾರೆ. ನೀತಿ ನಿಯಮಗಳ ಬಗ್ಗೆ ನಾವೇನು ಹೇಳಬೇಕಾಗಿಲ್ಲ. ಸಭಾಪತಿಗಳಾದ ತಾವು ಈ ಸಭೆಯ ಗೌರವವನ್ನು ಕಾಯ್ದುವುದಕ್ಕಾಗಲೀ ಮತ್ತು ಈ ಸಭೆಯಲ್ಲಿ ತರುವಂತಹ ಜನಹಿತ ಕಾರ್ಯಗಳ ಬಗ್ಗೆ ಆದಳಿತ ಪಕ್ಷದವರ ಲೋಪದೋಷಗಳನ್ನು ಬಯಲಿಗೆ ಎಳೆಯುವುದಕ್ಕಾಗಲೀ ವಿರೋಧಪಕ್ಷದವರಿಗೆ ಮಾತನಾಡಲು ಹೆಚ್ಚು ಕಾಲಾವಕಾಶವನ್ನು ಕೊಡುವುದು ಅತ್ಯಂತ ಅವಶ್ಯಕ. ತಾವು ತುಂಬಾ ಅನುಭವಿಗಳೂ ಹಿರಿಯರೂ ಹಾಗೂ ವಯೋವೃದ್ಧರೂ ಆಗಿದ್ದೀರಿ. ಕಾಂಗ್ರೆಸ್ಸಿನಲ್ಲಿರತಕ್ಕ ಜಾಡ್ಯವನ್ನು ತೊಡೆದುಹಾಕುವುದಕ್ಕೆ, ಮತ್ತು ಜನ ಹಿತಕಾರ್ಯಗಳನ್ನು ಮಾಡುವ ಬಗ್ಗೆ ವಿರೋಧ ಪಕ್ಷದವರಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡುವುದನ್ನು ಗಮನದಲ್ಲಿಟ್ಟುಕೊಂಡು ತಾವು ನಮ್ಮನ್ನು ಆಶೀರ್ವದಿಸಬೇಕು. ನಾನು ತಮ್ಮನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ತಾವು ಅವಿರೋಧವಾಗಿ ಆಯ್ಕೆಯಾಗದಿದ್ದಕ್ಕಾಗಿ ನಾನು ವಿಷಾದವನ್ನು ವ್ಯಕ್ತ ಮಾಡುತ್ತೇನೆ.

† Sri V. L. PATIL (Raibag).—Mr. Speaker, Sir, before I congratulate you on your election as Speaker I wish to state that there is a sense of injury and a sense of hurt in the minds of the Opposition and that is that we were not consulted about your election. We were very proud to read about you in newspapers. I had no occasion to be inside the Assembly. Having read in papers comments about how you conduct the deliberations inside the Assembly I was very proud that everything that was going on inside the Assembly was going on according to justice and so we wanted that the gentleman of our choice for Speakership must be such a person. In fact we from the Opposition side did desire that somebody of our choice must be put up as a candidate for Speakership and that could have been you and yourself alone, but the party in power being proud of its strength never bothered to consult us on this question because they were sure that they were going to elect you and they wanted to take to themselves the credit for electing you as Speaker. At the same time, we on the Opposition side also did want to have your guidance and your leadership, but the party in power deprived us of the chance of associating with your election and that is the sense of injury that we are having. We have a right to call you as the mother of the family. We want that we should not be treated as step-children and we should not be made to feel that a stepmother is there. We on our side want to assure that we shall try to function within our limits. Some of us are coming here for the first time and we want your guidance and patronage. Whenever there is a call from the people, we want your help and guidance to ventilate it on the floor of the House because for us the people's call is the supreme call and we are answerable to it. We want your guidance for the coming five years in the discharge of our duties. There is a supreme judge outside who will judge our performance

(SRI V. L. PATIL)

here and in whom real power is vested. The people are the supreme judge of our performance here. They have elected us and we have come here as their representatives. It is with that sense of feeling that we want to function here and we want all guidance and protection from you for that purpose. We hope that you will give us the necessary guidance and help.

12-30 P.M.

Sri B. P. GANGADHAR (Tumkur).—While associating myself with the fine sentiments expressed on your election as Speaker, I have to submit that most of us or some of us are newcomers here and so when we take part in the proceedings, there may be some mistake in the procedure or in the statements made. In those circumstances, I request you not to take a harsh view of the same.

So far as this election is concerned, we believe that this is an eye-opener to the Treasury Benches because this was an occasion for show of strength. So I request the Treasury Benches not to dismiss the Opposition very lightly. We want that both sides should work together so that the interests of the workers, the labourers, the ryots and the poor people will be safeguarded. From this perspective I request you to weigh all matters that come up for discussion here and I am sure you will weigh them in a scale of gold and give your decision accordingly. I am very happy on this memorable occassion of your elevation as Speaker and I associate myself with the sentiments expressed by my predecessors.

† Sri M. MALLIKARJUNASWAMY (Malavalli).—Mr. Speaker, Sir, as an acknowledged as well as an unacknowledged leader of the Scheduled Castes community and as an acknowledged representative in the Legislature, I deem it an act of proud privilege to speak on this occasion on behalf of the Scheduled Castes. I consider this day as a *gala day* in the history of my function as legislator. I see that many Scheduled Castes members have come to this House who do not know any procedure. They have no knowledge of the powers and privileges of this House as representatives. I say, Mr. Speaker Sir, we are wedded to democracy and socialism that is democratic socialism. Democracy is the method and socialism is the goal. Therefore, I say here, on behalf of the youngsters, that you as Speaker is occupying that exalted position just like St. Peter who was the custodian of the golden key of the Heaven and the iron key of the hell. It is only at the hands of the youngsters that Socialism has got to grow, develop and prosper in this country. In my humble opinion, even if you take the international sphere, socialism is suspending in the horizon and all over the world youths have come to feel that socialism is the only panacea for all the economic maladies and

social ills. In this context, I am expecting from you a pioneering part in dealing with the youngsters and trying to help them with all your knowledge of jurisprudence. I profusely congratulate you Mr. Speaker, Sir.

†ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷರೇ, ತಮ್ಮ ದಕ್ಷತೆ ಮತ್ತು ನಿಷ್ಪಕ್ಷಪಾತದಿಂದ ಕೂಡಿದ ಸೇವೆಯನ್ನು ನೋಡಿ ಎರಡನೆಯ ಬಾರಿ ಈ ಸ್ಥಾನಕ್ಕೆ ಚುನಾಯಿತರಾಗುವುದು ಒಂದು ಹೆಮ್ಮೆಯ ವಿಚಾರ. ಈ ಸಭೆಯು ಘನತೆ ಗೌರವವನ್ನು ಕಾಪಾಡುವುದು ತಮ್ಮ ಕರ್ತವ್ಯ. ವಿರೋಧ ಪಕ್ಷದವರಿಗೆ ಪೂರ್ಣ ಸಹಕಾರವನ್ನು ನೀಡಿ ಬೇರೆ ರಾಜ್ಯಗಳ ಸಭೆಗಳಿಗೆ ನಮ್ಮ ಸಭೆ ಮಾದರಿಯಾಗಿರಲಿ ಎಂದು ಹಾರೈಸುತ್ತೇನೆ.

†Sri R. M. DESAI (Bilgi).—Mr. Speaker Sir, I wish to heartily congratulate you on being the Speaker of this august House for the second time, which is an inevitable choice. We are happy on your choice. For the last five years, you have conducted the deliberations of the House in the manner that it should have been. We have read in the papers that for the last five years, in many Houses there were so many confusions and pandemoniums. But our House conducted itself in a regular and disciplined manner and the credit for all that goes to you Sir. I do not wish to dwell on how you should do. I congratulate you on behalf of our district and on behalf of myself and I pray God to bless you with long life and health.

†ಶ್ರೀ ಎಸ್. ಎಂ. ಕೊಳ್ಳಬರಯ್ಯ ಸೋಗಿ (ಪಡಗಲು).—ಮಾನ್ಯ ಸಭಾಪತಿಗಳೇ, ವಿಧಾನ ಸಭೆಯು ಸಭಾಪತಿಗಳ ಸ್ಥಾನಕ್ಕೆ ಅತ್ಯಂತ ಉನ್ನತವಾದುದು. ಅಂಥ ಸ್ಥಾನಕ್ಕೆ ಉನ್ನತ ಪ್ರಭಾವವಳ್ಳ ತಾವು ಆರಿಸಿ ಬಂದಿರುವುದು ಅತ್ಯಂತ ಗೌರವದ ಮಾತಾಗಿದೆ. ಇಡೀ ದೇಶದಲ್ಲೇ ತಾವು ಆದರ್ಶ ಸಭಾಪತಿಗಳಾಗಿದ್ದೀರಿ ಎಂದೂ, ಕೀರ್ತಿವಂತರಾಗಿದ್ದೀರಿ ಎಂದೂ ತಿಳಿದುಬಂದಿದೆ. ಇದುವರೆಗೆ ಎಲ್ಲಾ ಸದನ್ಯ ನ ವ್ಯಕ್ತಪಡಿಸಿದ ರೀತಿ ನರ್ವ ನದ್ಗುಣಗಳು ತಮ್ಮಲ್ಲಿವೆ. ಕೆಲವರು ಹೇಳಿದ ರೀತಿ ತಮ್ಮ ದಕ್ಷತೆ ಅಷ್ಟೇ ಅಲ್ಲ, ಉದಾತ್ತ ಗುಣ ತಮ್ಮಲ್ಲಿದೆ. ಅಂತಹ ಒಂದು ಜೀವನದ ಆದರ್ಶವನ್ನು ತಾವು ಪಡೆದಿದಿರಿ. ತಮ್ಮ ಕಾಲದಲ್ಲಿ ಇಲ್ಲಿ ನಡೆಯುವ ಕಾರ್ಯಕಲಾಪಗಳು ಆದರ್ಶವಾದ ರೀತಿಯಲ್ಲಿ, ನರ್ವರಿಗೂ ಒಪ್ಪುವ ರೀತಿಯಲ್ಲಿ ಇರಬೇಕು. ಎಲ್ಲಾ ನದಸ್ಯರ ಗೌರವ ಮತ್ತು ದಕ್ಷತೆಗೆ ತಕ್ಕ ರೀತಿಯಲ್ಲಿ ಸಭೆಯ ಕಾರ್ಯ ಕಲಾಪಗಳು ತಮ್ಮ ಕಾಲದಲ್ಲಿ ನಡೆಯುತ್ತದೆಯೆಂದು ನಮಗೆ ಸಂಪೂರ್ಣ ವಿಶ್ವಾಸವಿದೆ. ಈ ಸಭೆಯು ಘನತೆ ಗೌರವಗಳನ್ನು ಎತ್ತಿ ಹಿಡಿಯಲು ಎಲ್ಲಾ ಸದಸ್ಯರ ನಹಕಾರಗಳು ತಮಗೆ ದೊರೆಯುತ್ತದೆಂದು, ಅದೇ ರೀತಿ ಈ ನಭೆಯು ಇಡೀ ದೇಶದಲ್ಲೇ ಉನ್ನತ ಮುಖ್ಯದಲ್ಲಿ ನಡೆಯುತ್ತದೆಂದು ಭಾವಿಸಿದ್ದೇನೆ. ತಮ್ಮ ಅತ್ಯಂತ ವಿಶ್ವಾಸದಿಂದ ಹೊಸದಾಗಿ ಬಂದಿರುವ ನದಸ್ಯರುಗಳಿಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ತಮ್ಮಿಂದ ಎಲ್ಲಾ ನದಸ್ಯರಿಗೂ ನರ್ವ ಮಾರ್ಗದರ್ಶನ ನಿಗಲೆಂದು ಹಾರೈಸಿ, ಮುಕ್ತಾಯ ತಾವು ಅಧ್ಯಕ್ಷ ಸ್ಥಾನಕ್ಕೆ ಅರಿಸಿಬಂದಿರುವುದಕ್ಕಾಗಿ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Dr. R. NAGAN GOWDA (Hospet).—Mr. Speaker Sir, While congratulating you on your elevation to this high place, I wish to say that this Assembly must congratulate itself for having got the services of a person like you to be our Speaker. In an Assembly under parliamentary practice in *praja prabhutva*, decisions are taken by discussion and debate; and to carry on these discussions we need guidence from one whose qualities have been just now mentioned by both the Opposition and the members of the Government party today. Sir, you are eminently qualified to occupy this office by your experience and by your abilities. I, therefore, wish to congratulate you on this occasion.

†ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಸಭಾಪತಿಗಳೇ, ತಾವು ವಯೋವೃದ್ಧರೂ, ಜ್ಞಾನವೃದ್ಧರೂ, ನ್ಯಾಯಪರಿಣತರೂ, ನ್ಯಾಯ ಪಕ್ಷಪಾತಿಗಳೂ ಆಗಿದ್ದೀರಿ. ತಮ್ಮಂತಹ ಹಿರಿಯರು ಸಭಾಪತಿಗಳಾಗಿರುವುದು ನಮಗೆ ಹೆಮ್ಮೆ. ನಾವು ತಮ್ಮನ್ನು ಆದರದಿಂದ ಈ ಸ್ಥಾನಕ್ಕೆ ಸ್ವಾಗತಿಸುತ್ತೇವೆ. ನನ್ನ ಮಿತ್ರರನೇಕರು ತಮ್ಮ ಸಹಾಯ ಸಹಕಾರವನ್ನು ಅನೇಕ ವಿಷಯಗಳ ಬಗ್ಗೆ ಕೊರಿಯರ್ದಿರೆ. ನಾನು ಬೆಂಗಳೂರು ಪಟ್ಟಣದ ವಾಸಿ. ಬೆಂಗಳೂರು ಪಟ್ಟಣದ ಜನರು ಬಹಳ ಕಷ್ಟಪಡುತ್ತಿದ್ದಾರೆ. ಬೆಂಗಳೂರು ಜನರು ಹೆಚ್ಚು ತೆರಿಗೆಯನ್ನು ಕೊಟ್ಟರೂ ಸಹ ಅವರು ಯಾರಿಗೂ ಬೇಡವಾಗಿದ್ದಾರೆ. ಬಹಳ ಹಿಂದಿನಿಂದಲೂ ನಡೆದುಕೊಂಡುಬಂದಿರುವ ಸ್ಥಳೀಯ ಸಂಸ್ಥೆಯಾದ ಕಾರ್ಪೊರೇಷನ್ ಇಂದು ಅನಾಥವಾಗಿದೆ ಮತ್ತು ಎರಡು ವರ್ಷಗಳಿಂದಲೂ ನೀರಿನ ಸಮಸ್ಯೆಯ ಬಗ್ಗೆ ನಾವು ಹೋರಾಡುತ್ತಿದ್ದರೂ ಸಹ ಜನರಿಗೆ ಅನುಕೂಲವಾಗಿಲ್ಲ. ಆದ್ದರಿಂದ ಈ ಸಭೆಯಲ್ಲಿ ಬೆಂಗಳೂರು ಸಮಸ್ಯೆಗಳು ಬಂದಾಗ ನಾವು ಮಾತನಾಡುವುದಕ್ಕೆ ಹೆಚ್ಚು ಕಾಲವನ್ನು ಮತ್ತು ಸಹಕಾರವನ್ನು ಕೊಡಬೇಕೆಂದು ಕೇಳಿಕೊಂಡು ಈ ದಿವಸ ತಾವು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವುದಕ್ಕೆ ನಮ್ಮೆಲ್ಲರ ಅಭಿನಂದನೆಗೆ ಪಾತ್ರರಾಗಿದ್ದೀರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ).—ಮಾನ್ಯ ಸಭಾಪತಿಗಳೇ, ಈ ಪಕ್ಷಾತೀತ ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳ ನಾನು ತಾವು ಎಲ್ಲಾ ಪಕ್ಷದವರಿಗೂ ಸರಿಯಾದ ಸಹಕಾರವನ್ನು ಕೊಡಬೇಕೆಂದು ಹೇಳಿ, ನನ್ನ ವತಿಯಿಂದ ಲೋಕಸೇವಾ ಸಂಘದ ಪರವಾಗಿ ತಮ್ಮನ್ನು ಸ್ವಾಗತಿಸಿ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಹಂಚೆ ವೀರಣ್ಣ (ಶಿರೀಕೆರೆ).—ಮಾನ್ಯ ಅಧ್ಯಕ್ಷರೇ, ತಾವು ಈ ದಿವಸ ಜುನಾಯಿತರಾಗಿರುವುದು ನಮಗೆ ಹೆಮ್ಮೆಯ ವಿಚಾರವೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ವಿರೋಧ ಪಕ್ಷದವರಿಗೆ ಹೆಚ್ಚಿನ ಸಮಯವನ್ನು ಕೊಡಬೇಕು. ತಮ್ಮ ನೆರವು ಹೆಚ್ಚು ಇರಬೇಕು ಎಂದು ಮುಕ್ತವಾಗಿ ತಮ್ಮ ಗಮನಕ್ಕೆ ತಂದು ಈ ದಿವಸ ತಮ್ಮನ್ನು ಸ್ವಾಗತಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ತಾವು ಪುನಃ ಈ ಸದನದ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ ಎನ್ನುವ ವಿಷಯ ನಮಗೆ ಗೊತ್ತಿತ್ತು. ಆದರೂ ಆಡಳಿತ ಪಕ್ಷದ ಮುಂದಾಳು ಕೊನೆಯ ಪಕ್ಷ ವಿರೋಧಪಕ್ಷದವರೊಂದಿಗೆ ಸಮಾಲೋಚನೆ ಮಾಡಿಯಾರು ಮತ್ತು ಈ ಸ್ಪರ್ಧೆಯನ್ನು ತಪ್ಪಿಸಬೇಕು ಎನ್ನುವ ವಿಷಯವೂ ಇತ್ತು. ಆದರೆ ಅದು ಯಶಸ್ವಿಯಾಗಲಿಲ್ಲ. ನಾವು ಅದರಿಂದ ಇಲ್ಲಿ ವಿರೋಧಿಸಬೇಕಾಯಿತು ಮತ್ತು ನಮ್ಮ ಕಡೆಯಿಂದ ಒಬ್ಬರನ್ನು ಸ್ಪರ್ಧೆಗೆ ನಿಲ್ಲಿಸಬೇಕಾಯಿತು, ಆದುದಂತೆ ವಿರೋಧ ಪಕ್ಷದವರು ಮೋಟನ್ನೂ ಮಾಡಬೇಕಾಯಿತು. ತಾವು ಈ ಸದನದ ಅಧ್ಯಕ್ಷರಾಗಿರುವುದಕ್ಕೆ ಎಲ್ಲ ಅರ್ಹತೆಗಳನ್ನೂ ಪಡೆದಿದ್ದೀರಿ ಎನ್ನುವುದರ ಬಗ್ಗೆ ಯಾವ ಸಂದೇಹವೂ ಇಲ್ಲವಿದ್ದಿಲ್ಲ. ನಮ್ಮೆಲ್ಲ ಈ ಸಭೆಗೆ ಹೊಸದಾಗಿ ಬಂದಿರುವ ಕೆಲವು ಸದಸ್ಯರು ಸಹಜವಾಗಿ ವ್ಯಕ್ತಪಡಿಸಿರಬಹುದು ಎಂದು ಭಾವನೆಯೇನು ಎಂದರೆ, ಆಳುವ ಪಕ್ಷಕ್ಕೆ ಸೇರಿರುವವರನ್ನೇ ಅವರು ಸದನದ ಅಧ್ಯಕ್ಷರನ್ನಾಗಿ ಮಾಡುವುದರಿಂದ ವಿರೋಧಪಕ್ಷಕ್ಕೆ ಎಲ್ಲಿಯಾದರೂ ಪಕ್ಷಪಾತವಾಗುತ್ತೋ ಏನೋ ಎನ್ನುವ ಸಂದೇಹವುಂಟಾಗಿದೆ ಎಂದು ಅವರು ವ್ಯಕ್ತಪಡಿಸಿದ್ದಾರೆ. ಅಲ್ಲದೆ ವಿರೋಧ ಪಕ್ಷದ ಎಲ್ಲ ಸದಸ್ಯರೂ ಈ ಸಭೆಯ ಎಲ್ಲ ಗೌರವ ಹಕ್ಕುಬಾಧ್ಯತೆಗಳನ್ನೂ ಎತ್ತಿ ಹಿಡಿಯುವುದರಲ್ಲಿ ತಮಗೆ ಎಲ್ಲರ ಸಹಕಾರಗಳೂ ದೊರೆಯುತ್ತವೆ ಎನ್ನುವುದರ ಬಗ್ಗೆ ಈ ಸಂದರ್ಭದಲ್ಲಿ ತಮಗೆ ಆಶ್ವಾಸನೆ ಕೊಡುತ್ತೇನೆ. ಮತ್ತು ಈ ಸದನದ ಅಧ್ಯಕ್ಷರಾಗಿ ತಾವು ಜುನಾಯಿತರಾದುದಕ್ಕಾಗಿ ಈಗಾಗಲೇ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ಮಾತನಾಡಿದ್ದಾರೆ ಆದರಲ್ಲೂ ಕೆಲವು ತಮಗೆ ಗೊತ್ತಿರುವ ಹಾಗೆ ಅಧ್ಯಕ್ಷರಿಂದ ವಿರೋಧಪಕ್ಷದವರಿಗೆ ಎಷ್ಟು ಸೌಕರ್ಯಗಳು ದೊರೆಯಬೇಕು ಎನ್ನುವುದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಈ ನಾಲ್ಕನೇ ಜುನಾವಣೆಯ ನಂತರ ಈಗಾಗಲೇ ರಚನೆಯಾಗಿರಬಹುದು ವಿರೋಧಪಕ್ಷದಲ್ಲಿ ಒಟ್ಟಿನ ಸಾಮ್ಯ ಸ್ವಲ್ಪ ಹೆಚ್ಚಾಗಿದೆ. ಮತ್ತು ವಿರೋಧಪಕ್ಷದ ಗಾತ್ರ ಮತ್ತು ಗುಣ ಇವೆರಡರಲ್ಲೂ ಎಷ್ಟೊರಮಟ್ಟಿಗೆ ಹೆಚ್ಚಾಗಿದೆ ಎನ್ನುವುದನ್ನೂ ತಾವು ಗಮನಕ್ಕೆ ತಗೆದುಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ. ಮತ್ತು ನಾನು ಈ ಸಂದರ್ಭದಲ್ಲಿ ತಮಗೆ ವಿನಂತಿಮಾಡುವುದು, ಇಪ್ಪತ್ತು ವರ್ಷಗಳಾದರೂ ಈ ಸಭೆಯ ನಡವಳಿಕೆಗಳು ಹಾಗೂ ವಿಂಧಿನೆಗಳು ಕನ್ನಡದಲ್ಲಿ ಅಚ್ಚಾಗಿವೆ ಎನ್ನುವುದು ಇನ್ನೂ ನನಗಂತೂ ಗೊತ್ತಿಲ್ಲ ಅದು ದಯವಿಟ್ಟು ಇನ್ನು ಮುಂದಾದರೂ ಈ ಸಭೆಯ ನಡವಳಿಕೆಗಳನ್ನು ಹಾಗೂ ಸಂಬಂಧನೆಗಳನ್ನು ಕನ್ನಡದಲ್ಲಿ ಅಚ್ಚುಹಾಕಿಸುವ ಒಂದು ಸಂಪ್ರದಾಯವನ್ನು ತಮ್ಮ ಅಧಿಕಾರಾವಧಿಯಲ್ಲಿ ಏರ್ಪಾಡು ಮಾಡಲು ಪ್ರಾರಂಭಮಾಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.. ಮತ್ತು ಈಗಿರುವ

ನಿಬಂಧನೆಗಳನ್ನು ತಿದ್ದುಪಡಿ ಮಾಡುವುದು ಒಳ್ಳೆಯದು. ಅಲ್ಲದೆ ಇದರಲ್ಲಿರುವ ಒಂದು ವಿಧಿಯಲ್ಲಿ ಅಪ್ಪರ್ ಮಿಡಲ್ ವೇಷನ್ ಅಥವಾ ಒಂದು ನಿರ್ದಿಷ್ಟ ಸೂಚನೆ ಎಂದು ಹಿಂದೆ ಬಹಳ ಕಾಲದಿಂದ ಏನು ಇತ್ತೋ ಅಂತಹ ಒಂದು ವಿಧಿಯನ್ನು ಇಲ್ಲಿ ತಾವು ಪುನಃ ವಿಚಾರ ಮಾಡಬೇಕಾಗಿದೆ. ಹಾಗೂ ಪ್ರಶ್ನೆಗಳು ಮತ್ತು ಷಾರ್ಟ್‌ನೋಟಿಸ್ ಪ್ರಶ್ನೆಗಳು ಇಲ್ಲಿ ಬಂದಾಗ ಅವಕ್ಕೆ ಸರಕಾರದವರು ಸರಿಯಾಗಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ಸಂದರ್ಭಗಳೂ ಇದರಲ್ಲಿವೆ. ಇದಲ್ಲದೆ ಇನ್ನೂ ಅನೇಕ ವಿಚಾರಗಳೂ ಇರುವುದರಿಂದ ಇದನ್ನು ಸರಿಪಡಿಸುವ ಅಗತ್ಯ ಈ ಮಾನ್ಯ ಸಭೆಗೆ ಇದೆ. ಇದನ್ನೆಲ್ಲಾ ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂದು ತಮಗೆ ಸಲಹೆ ಮಾಡುತ್ತಿದ್ದೇನೆ. ಒಟ್ಟಿನಲ್ಲಿ ಈ ಸದನದ ಅಧ್ಯಕ್ಷರಾಗಿ ತಮ್ಮನ್ನು ಚುನಾಯಿಸಿರುವುದಕ್ಕಾಗಿ ನನ್ನ ಪರವಾಗಿ ಹಾಗೂ ವಿರೋಧ ಪಕ್ಷದ ಪರವಾಗಿ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

†ಶ್ರೀ ಸಿ. ಕೆ. ರಾಮಯ್ಯ ಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಸ್ಪೀಕರ್, ತಾವು ಈ ಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿ ಹಿಂದೆ ಬಂದಾಗಲೂ ಕೂಡ ನಾನು ವಿರೋಧ ಪಕ್ಷದ ಪರವಾಗಿ ತಮ್ಮನ್ನು ಅಭಿನಂದಿಸಿದ್ದೆ. ಈಗಲೂ ಸಹ ತಾವು ಇಲ್ಲಿ ಪುನಃ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ ಮತ್ತು ತಾವು ಯಾವರೀತಿ ಕೆಲಸಗಳನ್ನು ಮಾಡಿದ್ದೀರಿ ಎನ್ನುವುದನ್ನು ಎಲ್ಲರೂ ಮನಗಂಡಿದ್ದಾರೆ. ತಮ್ಮ ಮನಸ್ಸಿನ ಭಾವನೆಯು ಯಾವಾಗಲೂ ಒಂದು ತಕ್ಕಡಿಯಂತೆ ಸರಿಯಾಗಿದ್ದ ಪಕ್ಷದವರಿಗೆಲ್ಲರ ಆಶೆ ಆಕಾಂಕ್ಷೆಗಳು ಈಡೇರುತ್ತವೆ ಎಂದು ನಾನಾದರೂ ಭಾವಿಸುತ್ತೇನೆ. ತಾವು ಒಂದು ಗುರುತರವಾದ ಕೀರ್ತಿಯನ್ನು ಹೊತ್ತಿದ್ದೀರಿ. ಅಂತಹ ಕೀರ್ತಿಯನ್ನು ಹೊತ್ತಿರುವಾಗ ಯಾವರೀತಿ ಇರಬೇಕು ಎನ್ನುವುದಕ್ಕೆ ಬಸವಣ್ಣನವರು ಒಂದು ಪದದಲ್ಲಿ ಹೀಗೆ ಹೇಳಿದ್ದಾರೆ:

"ಎನ್ನ ಹೇಗಳೆ ಹೊನ್ನಶೂಲಕ್ಕೇರಿಸಿದರಯ್ಯ" ಎಂದು, ಈ ರೀತಿಯಾಗಿ ಯಾವ ಪಕ್ಷಪಾತವೂ ಇಲ್ಲದಂತೆ ಕೆಲಸ ಮಾಡಿದರೆ ಇಲ್ಲಿನ ಕೆಲಸಗಳು ಒಂದು ತಕ್ಕಡಿಯಂತೆ ಸರಿಯಾಗಿ ಕೆಲಸ ಮಾಡಲು ಸಹಾಯವಾಗುತ್ತದೆ ಮತ್ತು ಯಾವ ಪಕ್ಷದ ಅಭಿಮಾನವೂ ಇಲ್ಲದಂತೆ ಸರ್ವಪಕ್ಷಗಳ ಸಮುದ್ಧಾರವನ್ನೂ ಮಾಡುತ್ತೀರೆಂದು ಆಶಿಸಿ ತಮ್ಮನ್ನು ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಜಿ. ಬಣಕಾರ್ (ಬ್ಯಾಡಗಿ).—ಮಾನ್ಯ ಅಧ್ಯಕ್ಷರೇ, ತಮ್ಮನ್ನು ಈ ಸಭೆಯ ಅಧ್ಯಕ್ಷರಾಗಿ ಆರಿಸಿದುದಕ್ಕಾಗಿ ತಮ್ಮನ್ನು ಅಭಿನಂದಿಸಿ ಎರಡೊಂದು ಮಾತುಗಳನ್ನು ಹೇಳುವುದು ಅಗತ್ಯ ಎಂದು ನಾನು ಭಾವಿಸುತ್ತೇನೆ. ಇಂದಿನ ಸಭೆಯಲ್ಲಿ ಸ್ಪೀಕರ್‌ರವರ ಚುನಾವಣೆಯು ಅವಿರೋಧವಾಗಿ ನಡೆದಿದ್ದರೆ ಇನ್ನೂ ಹೆಚ್ಚು ಗೌರವ ಈ ಸಭೆಗೆ ದೊರೆಯುತ್ತಿತ್ತು, ಅದೇ ತಾವೇ ಈ ಸಭೆಯು ಸ್ವೀಕರ್ ಆಗಬೇಕೆಂದೂ ಕೂಡ ಇತ್ತು. ಆದರೆ ಅಡಳಿತ ಪಕ್ಷದವರು ತಳೆದ ಅಸಂಗತ ಧೋರಣೆಯಿಂದಾಗಿ ಇಲ್ಲಿ ವಿರೋಧಮಾಡಬೇಕೆಂದು ವಿರೋಧಪಕ್ಷದವರು ತೀರ್ಮಾನಿಸಿದರು. ಅಡಳಿತ ಪಕ್ಷದ ವತಿಯಿಂದ ವಿರೋಧ ಪಕ್ಷಗಳವರ ಕಡೆಗೆ ಯಾವ ಒಂದು ರೀತಿಯ ಸಮಾಲೋಚನೆಗಳೂ ನಡೆಯಲಿಲ್ಲ. ಇದರಿಂದಾಗಿ ವಿರೋಧ ಪಕ್ಷಗಳವರು ಚುನಾವಣೆಯ ಕಣಕ್ಕೆ ಅನಿವಾರ್ಯವಾಗಿ ಇಳಿಯಬೇಕಾಗಿ ಬಂತು. ನಿಷ್ಪಕ್ಷಪಾತವಾದ ದೃಷ್ಟಿಯ ತಾವು ವಿರೋಧಪಕ್ಷದವರನ್ನು ಸಮಾಂತರ ದೃಷ್ಟಿಯಿಂದ ಕಾಣುವಂತೆ ಅಡಳಿತ ಪಕ್ಷದವರಿಗೆ ಬಹಿರಂಗವಾಗಿ ಆಗದಿದ್ದರೂ ಅಂತರಂಗದಲ್ಲಿ ನಿರ್ದೇಶನ ನೀಡಬೇಕಾಗಿ ಪ್ರಾರ್ಥನೆ. ಅದರಂತೆ ನಾನೂ ತಮ್ಮನ್ನು ಅಭಿನಂದಿಸಿ ಕೇಳಿಕೊಳ್ಳುವುದು ನಮ್ಮೆಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡಿಕೊಳ್ಳಬೇಕಾದುದು ತಮ್ಮ ಅದ್ಯಕರ್ತವ್ಯ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್. ಲೋಕಯ್ಯ ನಾಯಕ್ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿನ ಈ ಸಭೆಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಮಿದಕ್ಕಾಗಿ ತಮ್ಮನ್ನು ಅಭಿನಂದಿಸುವುದರ ಮೂಲಕ ಈಗಾಗಲೇ ನಮ್ಮ ವಿರೋಧ ಪಕ್ಷಗಳವರು ಅನೇಕರು ತಮ್ಮ ಸೇವೆಯ ಬಗ್ಗೆ ಹೇಳಿ ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ಆದರೆ ಅಡಳಿತ ಪಕ್ಷದವರು ವಿರೋಧ ಪಕ್ಷದವರ ಸಲಹೆಗಳನ್ನು ಕೇಳದೆ ಒಂತರ ಒಂದು ಚುನಾವಣೆಯನ್ನು ನಡೆಸಬೇಕಾಗಿಬಂತು. ಅಡಳಿತ ಪಕ್ಷದವರು ಸಮಾಲೋಚನೆ ಮಾಡಿದ್ದರೆ ಇದಕ್ಕೆ ಅವಕಾಶವಿಲ್ಲದೆ ಇರುತ್ತಿತ್ತು. ಇನ್ನು ಮುಂದಾದರೂ ನಮ್ಮ ಮುಖ್ಯ ಮಂತ್ರಿಗಳು ಯಾವುದಾದರೂ ವಿಚಾರಗಳು ಬಂದಾಗ ವಿರೋಧ ಪಕ್ಷದವರೊಡನೆ ಸಮಾಲೋಚನೆ ಮಾಡಿ ಒಂದು ನಿರ್ಣಯ ಮಾಡುತ್ತಾರೆಂದು ನಾನು ನಂಬುತ್ತೇನೆ. ಒಂದು ವೇಳೆ ಅವಕಾಶವಿಲ್ಲದೆ ಇದ್ದರೂ ತಾವು ನ್ಯಾಯದಿಂದ ನಿಷ್ಪಕ್ಷಪಾತದಿಂದ ನಡೆಯುವವರಿಗೆ ತಮ್ಮ ಸಹಾಯ ಸಹಕಾರಗಳನ್ನು ಕೊಡುತ್ತೀರೆಂದು ಭಾವಿಸುತ್ತೇನೆ ಮತ್ತು ಅಡಳಿತ ಪಕ್ಷದವರೊಡನೆ ಸಹಕರಿಸಿ ನಮ್ಮ ಸೂಚನೆಗಳಿಗೆ ಸರಿಯಾದ ನ್ಯಾಯ ಸಿಗುವಂತೆ ತಮ್ಮ ಅಧಿಕಾರವನ್ನು ಚಲಾಯಿಸುವ ಒಂದು ಮೇಲ್ಪಂಕ್ತಿಯನ್ನು ತಾವು ಹಾಕಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಇಲ್ಲಿ ಈಗಾಗಲೇ ನಮ್ಮ ಅನೇಕ ಸದಸ್ಯರು ವ್ಯಕ್ತ ಮಾಡಿದಂತೆ ತಮ್ಮ ಆಯ್ಕೆಯನ್ನು ಒಮ್ಮತದಿಂದ ಮಾಡಲಿಕ್ಕೆ ಅಡಳಿತ ಪಕ್ಷದವರು ಅವಕಾಶ ಕೊಡಲಿಲ್ಲ. ಅವರಿಂದಾಗಿ ವಿರೋಧ ಪಕ್ಷದವರು ವಿರೋಧ ಮಾಡಬೇಕಾಗಿ ಬಂತು. ಅಡಳಿತ ಪಕ್ಷದವರು ಇದಕ್ಕೆ ತಕ್ಕ ವಾತಾವರಣ ಕಲ್ಪನೆ ಮಾಡದೇ ಇದ್ದುದಕ್ಕಾಗಿ ನಾನು ನನ್ನ ವಿಷಾದವನ್ನು ಇಲ್ಲಿ ವ್ಯಕ್ತಪಡಿಸಬೇಕಾಗಿದೆ. ಮತ್ತೆ ತಮ್ಮಲ್ಲಿ ನನ್ನದೊಂದು ಪ್ರಾರ್ಥನೆ. ಈ ಸಭೆಗೆ ಬರುವುದಕ್ಕೆ ಮುಂಚೆ ನಾವು ಒಂದು ತಾಲ್ಲೂಕುಗಳ ಜನರ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ. ಈಗ ಈ ಸಭೆಗೆ ಜನರ ಪ್ರತಿನಿಧಿಗಳಾಗಿ ಆರಿಸಿ ಬಂದಿರುವುದರಿಂದ ದೇಶ ಸೇವೆಯನ್ನು ಮಾಡಲಿಕ್ಕೆ ಒಂದು ಕಾಲವಕಾಶಬೇಕು ಎಂದು ವಿಶ್ವಾಸವಾವ ಈ ದೇಶದ ಜನರ ಪ್ರತಿನಿಧಿಗಳ ಅಭಿಪ್ರಾಯವನ್ನ ನಾವು ವ್ಯಕ್ತ ಮಾಡಿ ಜನರಿಗೆ ಕಲ್ಯಾಣವನ್ನುಂಟು ಮಾಡಲು ಒಂದು ನಿರ್ದಿಷ್ಟವಾದ ನೀತಿ ನಿಯಮಗಳನ್ನು ಹಾಕಿಕೊಂಡು ಇಲ್ಲಿ ಸೂಚನೆಗಳನ್ನು ಮಾಡುವಾಗ ಈ ಸಭೆಯು ಅಧ್ಯಕ್ಷರಾಗಿರುವ ತಾವು ಪಕ್ಷಾತೀತರಾಗಿ ಕೆಲಸ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇಷ್ಟನ ಒಂದು ನಿರ್ದಿಷ್ಟವಾದ ನೀತಿ ನಿಯಮಗಳ ಚೌಕಟ್ಟಿನಲ್ಲೇ ತಾವು ಕೆಲಸ ಮಾಡಬೇಕಾಗುತ್ತದೆ. ಅದರೂ ದೇಶದ ಸೇವೆ ಮಾಡಲು ಜನತೆಗೆ ಕಲ್ಯಾಣ ಮಾಡಲು ಇನ್ನು ಐದು ವರ್ಷಗಳು ಕೆಲಸ ಮಾಡುವಾಗ ವಿರೋಧ ಪಕ್ಷಗಳವರಿಗೆ ಒಂದು ಹಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಮತ್ತು ದೇಶದ ಜನತೆಗೆ ಕಲ್ಯಾಣವಾಗುವಂತೆ ಇಲ್ಲಿ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಇದಕ್ಕಾಗಿ ತಮ್ಮನ್ನು ಮತ್ತೊಮ್ಮೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಚಿಕ್ಕೇಗೌಡ (ಗುಬ್ಬಿ).—ಅಧ್ಯಕ್ಷರೇ, ನಾನು ಇಲ್ಲಿಗೆ ಹೊಸದಾಗಿ ಬಂದಿದ್ದರೂ ಕೂಡ ನನ್ನ ಮನಸ್ಸು ಪಾತಸ್ಥಾಡಬೇಕೆಂದು ಅಭಿಪ್ರಾಯಪಟ್ಟಿದೆ. ದಯವಿಟ್ಟು ತಾವು ಕ್ಷಮಿಬೇಕು. ಆದರೆ ತಾವು 20 ವರ್ಷಗಳಿಂದಲೂ ಪ್ರಜಾಪ್ರಭುತ್ವಕ್ಕೋಸ್ಕರ ಸತತವಾಗಿ ದುಡಿದು ಮತ್ತು ಶಕ್ತಿಯುತ ಹಾಗೂ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದೀರಿ ಮತ್ತು ಅಧ್ಯಕ್ಷರ ನಿಯಮಾವಳಿಗಳನ್ನೂ ಬಹಳ ದಕ್ಷತೆಯಿಂದ ನಡೆಸಿಕೊಂಡು ಬಂದು ಸರ್ವರಿಗೂ ಅನುಕೂಲಗಳನ್ನು ಮಾಡಿದ್ದೀರಿ. ಆದರೆ ಈ ವರ್ಷದ ಜುನಾವಣೆಯಲ್ಲಿ ಕುರುಕ್ಷೇತ್ರದಂತೆ ಎಲ್ಲವನ್ನೂ ಎದುರಿಸಿ ಪುನಃ ಅದೇ ಸರ್ಕಾರವನ್ನು ಸ್ಥಾಪನೆ ಮಾಡಲಿಕ್ಕೆ ದೇವರು ಅವಕಾಶ ಮಾಡಿಕೊಟ್ಟ ಮತ್ತು ತಮ್ಮನ್ನೇ ಅಧ್ಯಕ್ಷರನ್ನಾಗಿ ಮಾಡಿಸುವಂತೆ ನಮಗೆ ಶಕ್ತಿ ಕೊಟ್ಟನು. ರೈತರಿಗೂ ಕೂಡ ನಾವು ಬೇಕಾದಷ್ಟು ಯೋಜನೆಗಳನ್ನು ಹಾಕಿದ್ದೇವೆ. ಆದರೂ ಅವುಗಳ ಫಲ ರೈತರಿಗೆ ಬಹು ಸುಲಭವಾಗಿ ಸಿಗುತ್ತಾ ಇಲ್ಲ. ಅದನ್ನು ಪರಿಹರಿಸಿ ಅವರ ಅಭಿವೃದ್ಧಿಗಾಗಿ ಕೂಲಂಕಷವಾಗಿ ಆಲೋಚನೆ ಮಾಡಬೇಕು. ಕೆಲವು ನಿಯಮಗಳನ್ನೂ ಕೂಡ ಬದಲಾವಣೆ ಮಾಡಬೇಕು. ಅವನ್ನೆಲ್ಲಾ ಆಲೋಚನೆ ಮಾಡಿ ವ್ಯವಸಾಯದ ಏಳಿಗೆಗೆ ತಕ್ಕ ಪ್ರಯತ್ನ ಮಾಡಬೇಕು. ಈಗ ರೈತರ ಮುನ್ನೆನ್ನೆಲ್ಲಾ ಕೆಡಿಸಿದ್ದಾರೆ ರೈತರಿಗೆ ವ್ಯವಸಾಯಕ್ಕೆ ತಕ್ಕಂಥ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸಿ ತಾವು ನನಗೆ ಐದು ನಿಮಿಷಗಳವರೆಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ನಾನು ಆಭಾರಿಯಾಗಿದ್ದೇನೆ.

Smt WINNIFRED F. FERNANDES (Coondapur).—Hon'ble Speaker, I on my behalf and on behalf of my sisters congratulate you on this happy occasion. I pray God to bestow on you His grace and strength to fulfil your duties impartially in a better way and to serve the people and the State in a better way for the betterment of the Nation.

† ಶ್ರೀ ಕೆ. ಹೆಚ್. ಶ್ರೀನಿವಾಸ (ಪಾವಗಡ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಗೆ ಹೊಸದಾಗಿ ಕಾಲಿಟ್ಟಿರುವ ನಮ್ಮ ಪಕ್ಷದಲ್ಲಿರುವಷ್ಟಕ್ಕಂಥ ತರುಣರು ಮತ್ತು ವಿರೋಧ ಪಕ್ಷದಲ್ಲಿರುವಷ್ಟಕ್ಕಂಥ ಅನೇಕ ತರುಣರ ಪರವಾಗಿ ನಾನು ತಮಗೆ ಅತ್ಯಂತ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಮ್ಮ ಘನತೆ, ಯೋಗ್ಯತೆ ಮತ್ತು ನಿಷ್ಪಕ್ಷಪಾತವಾದ ಧೋರಣೆ ಬಗ್ಗೆ ಈಗಾಗಲೇ ನಮ್ಮ ಅನೇಕ ಹಿರಿಯರು ಪ್ರಸ್ತಾಪ ಮಾಡಿದ್ದಾರೆ ಮತ್ತು ತಮ್ಮ ಬಗ್ಗೆ ಕುಂಬಾ ವಿಶ್ವಾಸವನ್ನೂ ತೋರಿಸಿದ್ದಾರೆ. ತಮ್ಮ ಆಯ್ಕೆ ಒಂದು ಸರ್ವಾನುಮತ ಆಗಲಿದ್ದರೂ ನಿಜವಾಗಿಯೂ ಸರ್ವಾನುಮತದಿಂದ ಇದೆಯೆಂದು ಅನೇಕ ಸದಸ್ಯರುಗಳು ಸಮರ್ಥಿಸಿದ್ದಾರೆ. ಒಂದೇ ಒಂದು ತೊಂದರೆ ತಮ್ಮ ವಿರೋಧ ಪಕ್ಷದ ಒಬ್ಬ ಸದಸ್ಯರನ್ನು ನಿಲ್ಲಿಸಿದರು ಎಂದು ಹೇಳಿದರು. ತಾವು ನಿಷ್ಪಕ್ಷಪಾತವಾದ ನಡೆವಳಿಕೆಗಳನ್ನು ನಡೆಸಬೇಕು. ತಮ್ಮ ನಿಷ್ಪಕ್ಷಪಾತವಾದ ಘನತೆ ಬಗ್ಗೆ ನಮಗೆ ವಿಶ್ವಾಸ ಇದೆ. ತಾವು ಮೊನಚಿನಂತೆ ಕಾರ್ಯಾಚರಣೆಗಳನ್ನು ನಡೆಸಿಕೊಂಡು ಬರುವ ವಿಶ್ವಾಸ ಇದೆ.

ಅಲ್ಲದೆ ಈ ಸಭೆಗೆ ಹೊಸದಾಗಿ ಕಾಲಿಟ್ಟಿದಕ್ಕೆ ತರುಣರೆಲ್ಲರಿಗೂ ಹೆಚ್ಚು ಅವಕಾಶವನ್ನು ಕೊಡುಬೇಕೆಂದು ನಾನು ಕೇಳುತ್ತೇನೆ. ಬೇಕಾದಷ್ಟು ಕಾಲವನ್ನು ತೆಗೆದುಕೊಂಡು ಅವರ ಒಂದು ಅಚಾಣಿಯಲ್ಲಿ ತಪ್ಪು ಬಾರದಂತೆ ವಿಶೇಷ ಸಹಾನುಭೂತಿಯನ್ನು ತೋರಿಸಬೇಕು ಮತ್ತು ಯಾವುದೇ ಒಂದು ಅಭಿಪ್ರಾಯವನ್ನು ಚರ್ಚೆಯಲ್ಲಿ ಕೊಡಬೇಕಾದ ಹಿರಿಯರು ಈಗಿನ ತರುಣರಿಗೆ ಹೆಚ್ಚಿನ ಅವಕಾಶ ಕೊಡಬೇಕು ಎಂದು ನಾನು ಕೇಳುತ್ತೇನೆ. ನಾವೆಲ್ಲಾ ತಮ್ಮ ಗೆಳೆಯರು ಎಂದು ಶ್ರೀ ಪಾಟೀಲ್ ನಾಗರಾಜ್‌ರವರು ಹೇಳಿದಂತೆ ಜನತೆಯು ಅನುಕೂಲಗಳ ಒಗ್ಗೆ ಹೋರಾಟವನ್ನು ಕೈಗೊಂಡಿರತಕ್ಕ ಪರಾಗಿರುವುದರಿಂದ ಯಾವ ಒತ್ತಡ ಮನೋಭಾವನೆಯೂ ಇಲ್ಲದೇ ಹೋರಾಡತಕ್ಕವರಾಗಿದ್ದೇವೆ. ಆದರೆ ಈ ಸಭೆಯಲ್ಲಿ ಹೋರಾಟದ ಸ್ವರೂಪಕ್ಕೂ ಸ್ವಲ್ಪ ವ್ಯತ್ಯಾಸ ಆಗಬೇಕಾಗುವುದು ಅನಿವಾರ್ಯವಾಗಿದೆ. ಅಂತಹ ಒಂದು ಅವಶ್ಯಕವಾದಂತಹ ಹೋರಾಟಕ್ಕೆ ತಾವು ಸಹಾನುಭೂತಿಯನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಮತ್ತು ತಾವು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

1-00 P.M.

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಅಧ್ಯಕ್ಷರೇ, ಕೆಲವು ಹಿರಿಯ ಸದಸ್ಯರು ಹೇಳಿದರು, ತಾವು ಪಕ್ಷಾತೀತವಾದ ಚುನಾವಣೆಯಿಂದ ಬಂದಿದ್ದರೆ ಚೆನ್ನಾಗಿತ್ತು ಎಂದು. ತಮಗೂ ಕೂಡ ಈ ರೀತಿ ಆಗಿದ್ದರೆ ಚೆನ್ನಾಗಿತ್ತು ಎಂದು ಅನ್ನಿಸುತ್ತದೆ. ಆದರೆ ಈ ದಿವಸ ಇಲ್ಲಿ ಕ್ಷೇತ್ರ ಚುನಾವಣೆ ಆಗಬೇಕಾಗಿದೆ. ಪಾರ್ಲಿಮೆಂಟರಿ ಕ್ಷೇತ್ರ ನಮ್ಮದೇ ಆದ ಕ್ಷೇತ್ರದಿಂದ ಇದ್ದು ಚುನಾವಣೆ ಆಗಿದ್ದು ಬಹಳ ಸಂತೋಷವಾಗಿದೆ. ಇನ್ನೊಂದು ವಿಷಯವನ್ನು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ನಾನು ಹಿಂದುಳಿದ ಮತ್ತೆನಾಡು ಕ್ಷೇತ್ರದಿಂದ ಬಂದಿದ್ದೇನೆ. ಈ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ತಾವೂ ಕೂಡ ಚುನಾವಣೆಯಾಗಿ ಬಂದು ಈಗ ಇನ್ನೂ ಉತ್ತಮವಾದಂಥ ಸ್ಥಾನವನ್ನು ಪಡೆದು ಕೊಂಡಿದ್ದೀರಿ. ತಮ್ಮ ಗಮನದಲ್ಲಿ ಇರಬೇಕಾದ ಒಂದು ವಿಷಯವನ್ನು ತಿಳಿಸುತ್ತೇನೆ. ತಾವು ವಿದ್ಯಾವಂತರು. 5 ವರ್ಷದಿಂದಲೂ ಚಿಕ್ಕೋಡಿ ಕ್ಷೇತ್ರ ಎಂಬುದು ಬಹಳ ಹಿಂದುಳಿದಕ್ಕಂಥ ಸ್ಥಳ ಎಂಬ ಕೀರ್ತಿಯನ್ನು ಗಳಿಸಿದೆ. ಇದನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ತಾವು ಹಿರಿಯರು. ತಾವು ಉನ್ನತವಾದ ಸ್ಥಾನಕ್ಕೆ ಆಯ್ಕೆಯಾಗಿದ್ದೀರಿ. ನಮಗೆ ಪರಮಾತ್ಮನು ಹೆಚ್ಚಿನ ಆಯುರಾರೋಗ್ಯವನ್ನು ಕೊಟ್ಟು ಎರಡು ಪಕ್ಷಕ್ಕೂ ಸಮಾನವಾದ ನ್ಯಾಯವನ್ನು ದೊರಕಿಸಿ ಕೊಡಬೇಕೆಂದು ಹೇಳಿ ನನಗೆ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸುತ್ತೇನೆ.

MR. SPEAKER.—At the very outset I must thank all the members for having elected me as the Speaker of the House. I must say that after elections the Speaker is the same whether for those that have voted for him or for those that voted against him because there cannot be two Speakers for this House. Just as in the general elections here also voting came to be inevitable and therefore that should not influence us after the elections are over. I wish to assure all the members that so far as I am concerned I will certainly forget all that has been said with regard to disturbing of my mind on account of the voting one way or the other.

Next, I must say that we are today starting practically the beginning of the tenure of the Five years. We have joined for the first time as members of one unit—Mysore Legislature—for the purpose of achieving good governance and progress of the Mysore State. One disability that would be attached to me will be that I will not have same opportunity and chance as the other members. Therefore, it is up to me to look to you to see that I get some chance somewhere to express the schemes or the ideas that I many have. But, so far as I am concerned, I have heard all that has been said. Very many suggestions